SRI A. LAKSHMISAGAR.—Sir, My specific question is. Government must announce its decision on Monday on the floor of the House. Whether the hon'ble Minister is able to do that ?

ಶ್ರೀ ವೈ. ರಾಮಕೃಷ್ಣ.— ತಾರೀಖು, ವಾರ, ಗಂಟೆಯನ್ನು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಸೋಮವಾರ ಮಾಡಿ.

ಶ್ರೀ ವೈ. ರಾಮಕೃಷ್ಣ.—ಆಗುವುದಿಲ್ಲ.

MR. DEPUTY SPEAKER.—It is a promise given to the hon'ble leader of the Opposition.

SRI A. LAKSHMISAGAR. -All right, Sir, I will leave it at that. I will raise it on Monday.

ಶ್ರೀ ಪಂಪಾಪತಿ.—ಭಾಷಾ ಚಳುವಳಿ ನಡೆಯುವಾಗ ಕೇಸುಗಳನ್ನು ಹಾಕಿರುವುದು ಮಾತ್ರವಲ್ಲದೆ ಅನೇಕ ಜನರ ಆಸ್ತಿಪಾಸ್ತಿ ಹಾನಿಯಾಗಿದೆ. ಚಿತ್ರದುರ್ಗ, ಹೊಳಲ್ಕೆರೆ ಭಾಗದಲ್ಲಿ ಆಸ್ತಿ ಹಾನಿಯಾಗಿದೆ. ತೀರ್ಮಾನ ತೆಗೆದುಕೊಳ್ಳುವಾಗ ಇದರ ಬಗ್ಗೆ ಗಮನ ಹರಿಸಬೇಕು. ಆಸ್ತಿಪಾಸ್ತಿ ಹಾನಿಯಾಗಿರುವವರಿಗೆ ಪರಿಹಾರ ಒದಗಿಸುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಅವರು ಬರಲಿ, ವಿಚಾರಣೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

## Private Members Resolutions.

*Reg. Constitution of a Board for the management of moveable and immoveable property for renovation of Temples.*

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಸನ್ಮಾನ್ಯ ಉಪಾಧ್ಯಕ್ಷರೆ, "ಹಿಂದೂ ದೇವಾಲಯಗಳ ಜೀರ್ಣೋದ್ಧಾರ ಮತ್ತು ಮೇಲ್ವಿಚಾರಣೆಗಾಗಿ ಮಂಡಳಿಯೊಂದನ್ನು ರಚಿಸಬೇಕೆಂದು ಈ ಸಭೆಯು ಸರ್ಕಾರವನ್ನು ಒತ್ತಾಯಪಡಿಸುತ್ತದೆ" ಎಂಬ ನಿರ್ಣಯವನ್ನು ಮಾನ್ಯ ಸದಸ್ಯರಾದ ಶ್ರೀ ಡಿ.ಟಿ. ಮಾಯಣ್ಣನವರು ಏನು ಮಂಡಿಸಿದ್ದಾರೆ ಅದರ ಪೇಲೆ ಕೆಲವು ಮಾತುಗಳನ್ನು ಆಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ದೇಶದಲ್ಲಿರತಕ್ಕ ಅತ್ಯುತ್ತಮವಾದ ಶಿಲ್ಪಕಲೆಯ ದೇವಸ್ಥಾನಗಳು ಇಂದು ಹೇಗೆ ಅತ್ಯಂತ ಹೀನ ಸ್ಥಿತಿಯಲ್ಲಿವೆ ಮತ್ತು ಅದನ್ನು ಸಂರಕ್ಷಣೆ ಮಾಡುವ ಹೊಣೆಗಾರಿಕೆ ಯಾವರೀತಿ ಇದೆ ಎಂಬ ಬಗ್ಗೆ ನಾನು ಹಿಂದೆ ಹೇಳುತ್ತಿದ್ದೆ. ಈಗ ಮೈಸೂರು ಜಿಲ್ಲೆಯ ಕೆಲವು ದೇವಸ್ಥಾನಗಳ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ಮೈಸೂರು ಜಿಲ್ಲೆಯ ಟೀ ನರಸೀಪುರ ತಾಲ್ಲೂಕಿನಲ್ಲಿರತಕ್ಕ ಸೋಮನಾಥ ದೇವಾಲಯ ಬಹಳ ಪ್ರಸಿದ್ಧವಾದುದಾಗಿದ್ದು. ೧೨ನೇ ಶತಮಾನದಲ್ಲಿ ವರ್ಧಮಾನದಿಂದ ರಚಿತವಾಗಿರುವ ದೇವಾಲಯ ಅದು. ಅಲ್ಲಿ ದೇವಸ್ಥಾನ ಮಾತ್ರ ಉಳಿದಿದೆ, ಆದರೆ ಮೂರ್ತಿ ಇಲ್ಲ. ಅದಕ್ಕೆ ಪ್ರಸನ್ನ ಕೇಶವ ದೇವಾಲಯ ಎಂದೂ ಹೆಸರಿದೆ. ಅಲ್ಲಿ ಮೂರ್ತಿಯನ್ನು ಮತ್ತೊಮ್ಮೆ ಪ್ರತಿಷ್ಠಾಪನೆ ಮಾಡಿ ಅಂದು ಏನು ವೈಭವವಿತ್ತೋ ಅದನ್ನು ಉಳಿಸಿ ಹೊಯ್ಸಳ ಸಾಮ್ರಾಜ್ಯದ ಒಬ್ಬ ಸಾಮ್ರಾಟ್ ಸ್ಥಾಪನೆ ಮಾಡಿರುವ ದೇವಸ್ಥಾನದ ಅಭ್ಯುದಯವನ್ನು ಮತ್ತೊಮ್ಮೆ ರೂಢಿಸತಕ್ಕ ಕಾರ್ಯವನ್ನು ಸರ್ಕಾರ ಮಾಡಬೇಕು ಎಂಬ ಮನವಿಯನ್ನು ಸಲ್ಲಿಸಿದೆ. ಚಾಮರಾಜನಗರ ತಾಲ್ಲೂಕಿನಲ್ಲಿ ದಿವ್ಯಲಿಂಗೇಶ್ವರ ದೇವಸ್ಥಾನ ಇದೆ. ಇದೊಂದು ಶಿಲ್ಪಕಲೆಗೆ ಪೆಸರಾದ ದೇವಸ್ಥಾನ. ಪ್ರಸಿದ್ಧ ಯಾತ್ರಾಸ್ಥಳವೂ ಆಗಿದೆ. ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಸಹಸ್ರಾರು ಜನರನ್ನು ಆಕರ್ಷಣೆ ಮಾಡತಕ್ಕ ಒಂದು ಕ್ಷೇತ್ರ. ಕರ್ನಾಟಕದಲ್ಲಿ ಅನೇಕ ಕಡೆ ಇರತಕ್ಕ ಎಡಿಯೂರು ಸಿದ್ಧಲಿಂಗೇಶ್ವರರು ತಪಸ್ಸು ಮಾಡಿದ ಪುಣ್ಯಕ್ಷೇತ್ರ. ಆ ಕ್ಷೇತ್ರದಲ್ಲಿ ಕೂಡ ದೇವಾಲಯ ಹೀನ ಸ್ಥಿತಿಯಲ್ಲಿದೆ,

ಶಿಥಿಲ ಸ್ಥಿತಿಯಲ್ಲಿದೆ. ಸರ್ಕಾರದ ಮುಜರಾಯಿ ಇಲಾಖೆ ಕೂಡ ಈ ಬಗ್ಗೆ ಗಮನ ಕೊಟ್ಟಿಲ್ಲ. ಆದ್ದರಿಂದ ಸರ್ಕಾರದವರು ಅದರ ಅಭಿವೃದ್ಧಿ ಬಗ್ಗೆ ಗಮನ ಹರಿಸಬೇಕು.

MR. DEPUTY SPEAKER.—The resolution is for the constitution of the Board of Management. But now you are giving all the details for renovation of temples and all other things which are outside the scope of the resolution. I agree it is important. Please urge for the constitution of the Board.

ಶ್ರೀ ಎಚ್. ಗಂಗಾಧರನ್.—ದೇವಸ್ಥಾನಗಳು ಎಂಥದ್ದಿವೆ, ಅದರ ಅವಶ್ಯಕತೆ ಎಷ್ಟಿವೆ, ಅದನ್ನು ಯಾವ ರೀತಿ ಪುನರೋತ್ಥಾನಗೊಳಿಸಬೇಕು ಎಂಬ ಬಗ್ಗೆ ಕೆಲವು ಅಂಶಗಳನ್ನು ಹೇಳಬೇಕಾಗುತ್ತದೆ. ಸುಮ್ಮನೆ ದೇವಾಲಯಗಳು ಎಂದರೆ ಹಳ್ಳಿಗಳಲ್ಲಿರುವ ಸಣ್ಣ ಪುಟ್ಟ ದೇವಾಲಯಗಳು ಎಂಬ ಅರ್ಥ ಬರ ಬಹುದು. ನಾವು ಹೇಳುವಂಥ ದೇವಾಲಯಗಳು ಅಂಥದ್ದಲ್ಲ. ಐತಿಹಾಸಿಕವಾಗಿರತಕ್ಕ, ಕನ್ನಡ ಜನರು ತನುಮಾನ ಧನಗಳನ್ನು ಅರ್ಪಿಸಿ ನಿರ್ಮಿಸಿರುವ ಶಿಲ್ಪಕಲೆಯಿಂದ ಜಗತ್ತನ್ನು ಚಕಿತಗೊಳಿಸಿರುವಂಥ ಕ್ರಿಯಾ ನಮ್ಮ ನಾಡಿನಲ್ಲಿ ನಡೆದಿದೆ. ಕನ್ನಡ ನಾಡಿನ ಶಿಲ್ಪ ವೈಭವವನ್ನು, ಕನ್ನಡ ನಾಡಿನ ಸಾಂಸ್ಕೃತಿಕ ವೈಭವವನ್ನು ರಕ್ಷಣೆ ಮಾಡತಕ್ಕ ಕಾರ್ಯಕ್ರಮವನ್ನು ರೂಪಿಸುವಾಗ ನಮ್ಮ ದೇಶದಲ್ಲಿ ಏನಿದೆ ಎಂಬ ಚಿತ್ರ ಸರ್ಕಾರದ ಗಮನಕ್ಕೆ ಬರಬೇಕು. ಅದನ್ನು ರಕ್ಷಣೆ ಮಾಡತಕ್ಕ ವ್ಯವಸ್ಥೆಯನ್ನು ಮಾಡದೇ ಹೋದ ಕಾರಣ ಈ ದೇವಾಲಯಗಳು ಶಿಥಿಲಗೊಂಡಿವೆ. ತನ್ನ ವೈಭವವನ್ನು ಕಳೆದುಕೊಂಡಿವೆ. ಈ ಬಗ್ಗೆ ಉದಾಹರಣೆಗಳನ್ನು ನಾನು ಹೇಳುತ್ತಿದ್ದೇನೆ. ಎಂಟು ವರ್ಷಗಳ ಕಾಲ ಕನ್ನಡ ನಾಡಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜ ಅರಸು ಅವರ ಕ್ಷೇತ್ರದಲ್ಲಿ ಒಂದು ಕ್ಷೇತ್ರ ರತ್ನಪುರಿ ಕೋಟೆ ಎಂಬುದಿದೆ. ಅಲ್ಲಿ ಒಂದು ಸಾವಿರ ಕಲ್ಲುಕಂಬದ ಮಂಟಪಗಳಲ್ಲಿರತಕ್ಕ ದೇವಾಲಯ ಇದೆ. ಒಂದು ವರ್ಷದಲ್ಲಿ ಒಂದು ತಿಂಗಳು ಅಲ್ಲಿ ಮಳೆಯಲ್ಲಿ ರತ್ನಗಳು ಕೊಚ್ಚಿಕೊಂಡು ಬರುತ್ತದೆಂಬ ಪ್ರತೀತಿ ಇದ್ದು ಗುಜರಾತಿನಿಂದ ಅದನ್ನು ಆರಿಸಿಕೊಳ್ಳಲು ಬರುತ್ತಾರೆ. ಸಾವಿರಾರು ರೂಪಾಯಿಗಳು ಖರ್ಚು ಮಾಡಿ ಕೊಂಡು ಬಂದು ಅಲ್ಲಿ ಕ್ಯಾಂಪ್ ಮಾಡಿ ರತ್ನಗಳನ್ನು ಆರಿಸಿಕೊಳ್ಳುತ್ತಾರೆ ಎಂಬ ಪ್ರತೀತಿ ಇದೆ ಅದರ ಅರ್ಥ ಭೂಮಿಯಲ್ಲಿ ಸಾಕಷ್ಟು ಪಜ್ರವೈಢೂರ್ಯಗಳಿವೆ ಎಂಬ ಪ್ರತೀತಿ ಈಗಲೂ ಇದೆ. ಅಲ್ಲಿ ಸಾವಿರ ಮಂಟಪಗಳ ಕಟ್ಟಡ ಬಿದ್ದುಹೋಗಿದೆ. ಅಲ್ಲಿರುವ ಮೂರ್ತಿಗಳು.....

ಶ್ರೀ ವೈ. ರಾಮಕೃಷ್ಣ.—ನಿಮ್ಮ ಭಾಷಣ ಕೇಳಿ ಅಲ್ಲಿ ಜನರು ಹೋಗಿ ಏನಾದರೂ ಮಾಡ ಬಹುದು.

ಶ್ರೀ ಎಚ್. ಗಂಗಾಧರನ್.—ಅದಕ್ಕೆ ಮುಂಜಾಗ್ರತವಾಗಿಯೇ ಏನಾದರೂ ವ್ಯವಸ್ಥೆ ಮಾಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಇಡೀ ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರದ ಗೌರವವನ್ನು ವೃದ್ಧಿಸತಕ್ಕ ಅನೇಕ ದೇವಾಲಯಗಳಿವೆ. ಹಿಂದಿನವರು ಸರ್ವಶಕ್ತಿಯನ್ನೂ ವಿನಿಯೋಗ ಮಾಡಿ ಅದನ್ನು ಕಟ್ಟಿಸಿದ್ದರು. ಇವತ್ತು ಸುಂದರವಾದ ಮೂರ್ತಿ ರಚನೆ ಮಾಡತಕ್ಕ ಕಲಾವಿದರ ತಂಡ ಇಳಿಯುತ್ತಿದೆ. ಈ ಬಗ್ಗೆ ತರಬೇತಿ ಕೊಡುವುದಕ್ಕೆ ಇರತಕ್ಕ ಸಂಸ್ಥೆ ಎಂದರೆ ಇಡೀ ಕರ್ನಾಟಕದಲ್ಲಿ ಮೈಸೂರಿನಲ್ಲಿರತಕ್ಕ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಒಂದೆ. ಹೊಸ ಸಾರಿ ಮಾನ್ಯ ಅರ್ಥ ಮಂತ್ರಿಗಳು ಮಾತನಾಡುವಾಗ ಈ ಶಿಕ್ಷಣ ಸಂಸ್ಥೆಗೆ ಎಲ್ಲ ಅನುಕೂಲಗಳನ್ನೂ ಒದಗಿಸಿಕೊಟ್ಟು ಶಿಲ್ಪಕಲೆ ಹೆಚ್ಚು ಅಭಿವೃದ್ಧಿಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದರು. ಅದನ್ನು ಮಾಡಬೇಕೆಂದು ಹೇಳುತ್ತೇನೆ. ಈ ಬಾರಿಯ ಆಯವ್ಯಯ ಭಾಷಣದಲ್ಲಿ ಈ ಬಗ್ಗೆ ಹೇಳಿದ್ದಾರೆ. ಈ ಶಿಲ್ಪಕಲೆಯನ್ನು ಏತಕ್ಕೆ ರಕ್ಷಣೆ ಮಾಡಬೇಕು, ಹೇಗೆ ರಕ್ಷಣೆ ಮಾಡಬೇಕು ಎಂಬ ಬಗ್ಗೆ ನಮ್ಮೆ ಹೇಳಿದ್ದೆ. ೧೯೬೦ನೇ ಇಸವಿಯಲ್ಲಿ ಡಾ॥ ಸಿ.ಪಿ. ರಾಮಸ್ವಾಮಿಯವರ ನೇತೃತ್ವದಲ್ಲಿ ಕೇಂದ್ರಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಿತ್ತು. ಆ ಸಮಿತಿಯವರು ಇಡೀ ರಾಷ್ಟ್ರದಲ್ಲಿರುವ ದೇವಾಲಯಗಳ ಬಗ್ಗೆ, ಸಂಸ್ಕೃತಿಯ ಬಗ್ಗೆ ಅಧ್ಯಯನ ನಡೆಸಿ ದೇವಾಲಯಗಳನ್ನು ಸಂರಕ್ಷಣೆ ಮಾಡತಕ್ಕ ಬಗ್ಗೆ ಒಂದು ಕಾರ್ಯಕ್ರಮವನ್ನು ರೂಪಿಸಬೇಕು ಎಂದು ವರದಿ ಕೊಟ್ಟಿದ್ದಾರೆ. ೧೯೬೫ನೇ ಇಸವಿಯಲ್ಲಿ ವರದಿ ಕೊಟ್ಟಿದ್ದಾರೆ. ಅದರಲ್ಲಿ ಕೆಲವು ಮಾಹಿತಿಗಳಿವೆ. ಯಾವ ದೃಷ್ಟಿಯಿಂದ ಅವುಗಳ ರಕ್ಷಣೆ ಮಾಡಬೇಕೆಂದು ತಿಳಿಸಿದ್ದಾರೆ. ಇದನ್ನು ನಮ್ಮ ಸರ್ಕಾರದವರು ತೀಪ್ರವಾಗಿ ಪರಿಶೀಲಿಸಬೇಕು. ದೇವಾಲಯಗಳ ರಕ್ಷಣೆ ಮಾಡುವ ದೃಷ್ಟಿಯಿಂದ ಏನೇನು ಕಾರ್ಯಕ್ರಮಗಳನ್ನು ಮಾಡಬೇಕೆಂಬ ಬಗ್ಗೆ ಹೇಳಿದ್ದಾರೆ.

Publication of agamas and history of temples;

provision for libraries with religious books and publication of literature and making them availatle to the public free of cost or at a nominal charge;

provision for religious discourses and kalakshepas;

grant of scholarships or stipends to Hindu students studying in educational institutions also to take up to study the Hindu religion;

promotion of temple architecture, sculpture and finance; establishment and maintenance of institutions wherein both modern as well as Hindu religious education is imparted;

establishment and maintenance of colleges or institutions for study of Hindu religion, Philosophy, Vedas Agamas, Shastras or contributions made thereto;

establishment and maintenance of orphanges or establishment and maintenance of asylum for lepor patients or persons who are suffering from other serious ailments;

establishment and maintenance of poor homes for destitutes of hindu widows with their children;

establishment and maintenance of hospitals and dispensaries for the benefit of pilgrims and devotees or worshippers.

ಇಷ್ಟು ಹೇಳಿದ್ದಾರೆ. ಇವತ್ತು ಸಾರ್ವಜನಿಕರ ಹಣದಿಂದ ವಿಶ್ವವಿದ್ಯಾನಿಲಯ, ಆಸ್ಪತ್ರೆ, ಎಲ್ಲವನ್ನೂ ನಡೆಸಬಹುದು. ತಿರುಪತಿಯಲ್ಲಿರತಕ್ಕ ದೇವಸ್ಥಾನದವರು ಅದನ್ನು ಮಾಡುತ್ತಿದ್ದಾರೆ. ಕರ್ನಾಟಕದಲ್ಲಿರತಕ್ಕ ಧರ್ಮಸ್ಥಳದವರು ಅನೇಕ ಕಾಲೇಜುಗಳನ್ನು ಅನೇಕ ಧರ್ಮಶಾಲೆಗಳನ್ನು ನಡೆಸುತ್ತಿದ್ದಾರೆ. ರಾಜ್ಯದ ಅನೇಕ ಕಡೆಗಳಲ್ಲಿ ಕಲ್ಯಾಣ ಮಂದಿರಗಳನ್ನು ಕಟ್ಟಿಸಿ ಸಹಾಯಕರಾಗಿದ್ದಾರೆ. ನಾನು ಒಮ್ಮೆ ಸರ್ಕಾರವನ್ನು ಪ್ರಾರ್ಥನೆ ಮಾಡಿದ್ದೆ. ಧರ್ಮಸಂಸ್ಥೆಗಳಿಗೆ ವಿಶ್ವವಿದ್ಯಾನಿಲಯವನ್ನು ವಹಿಸಿಕೊಡಿ ಎಂದು, ದೇವಸ್ಥಾನಗಳಿಗೆ, ಧರ್ಮಕಾರ್ಯಗಳಿಗೆ ಸಾರ್ವಜನಿಕರು ಹಣ ಕೊಡುತ್ತಾರೆ. ಅವರು ಆ ಧರ್ಮದ ಹಣದಿಂದ ಶಿಕ್ಷಣ ಸಂಸ್ಥೆಗಳನ್ನು, ವಿಶ್ವವಿದ್ಯಾನಿಲಯಗಳನ್ನು ನಡೆಸಬಹುದು. ಮಂಗಳೂರು ವಿಶ್ವವಿದ್ಯಾನಿಲಯವನ್ನು ಧರ್ಮಸ್ಥಳದವರಿಗೆ ವಹಿಸಿಕೊಟ್ಟು ಅದಕ್ಕೆ ಮಂಜುನಾಥೇಶ್ವರ ವಿಶ್ವವಿದ್ಯಾನಿಲಯ ಎಂದು ಹೆಸರಿಟ್ಟಿದ್ದರೆ ಧರ್ಮಸ್ಥಳದ ಧರ್ಮದ ಹಣದಿಂದ ಅವರು ವಿಶ್ವವಿದ್ಯಾನಿಲಯವನ್ನು ನಡೆಸುತ್ತಿದ್ದರು. ಹಾಗೆ ಮಾಡಿದ್ದರೆ ಸರ್ಕಾರಕ್ಕೆ ಹೊರೆ ಮತ್ತು ಹೊಣೆ ಕಡಿಮೆಯಾಗುತ್ತಿತ್ತು. ಆ ಕೆಲಸವನ್ನು ಸರ್ಕಾರದವರು ಮಾಡಬಹುದಾಗಿತ್ತು. ಗುಲ್ಬರ್ಗ ವಿಶ್ವವಿದ್ಯಾನಿಲಯವನ್ನು ಮಾಡಿದ್ದೀರಿ. ಶರಣ ಬಸವೇಶ್ವರ ದೇವಾಲಯದವರು ಅನೇಕ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಇವರಿಗೆ ಗುಲ್ಬರ್ಗ ವಿಶ್ವವಿದ್ಯಾನಿಲಯವನ್ನು ವಹಿಸಿಕೊಟ್ಟಿದ್ದರೆ ಅವರು ವಿಶ್ವವಿದ್ಯಾನಿಲಯವನ್ನು ನಡೆಸುತ್ತಿದ್ದರು.

ಹೀಗೆ ನಮ್ಮಲ್ಲಿರತಕ್ಕ ಧಾರ್ಮಿಕ ಸಂಸ್ಥೆಗಳನ್ನು ಒಂದು ಕಾನೂನಿನ ಅಡಿಯಲ್ಲಿ ತಂದು ರಕ್ಷಣೆ ಮಾಡಿದ್ರೆ ದೇವಸ್ಥಾನದ ಆಸ್ತಿಯನ್ನು ಉಳಿಸಿದ್ರೆ, ಅನೇಕ ದೇವಸ್ಥಾನಗಳಿಂದ ಸಾರ್ವಜನಿಕವಾಗಿ ಅಮೋಘ ಕೆಲಸವಾಗುತ್ತಿತ್ತು. ಆ ಕೆಲಸವನ್ನು ಮಾಡಬೇಕಾಗಿದೆ. ಈ ದೇವಸ್ಥಾನಗಳ ರಕ್ಷಣೆ ಮಾಡುವು

ದರಿಂದ ಕಲೆ ಅಭಿವೃದ್ಧಿಯಾಗುತ್ತದೆ. ಇನ್ನೊಂದು ಡಿಸ್‌ಕೋರ್ಸ್ ಮತ್ತು ಕಾಲಕ್ಷೇಪ. ನಮ್ಮಲ್ಲಿ ಏನಾಗಿದೆ ? ಆಧುನಿಕ ಸಂಗೀತಕ್ಕೆ ಜನರು ಮನಸೋತು, ಪ್ರಾಚೀನ ಕಾಲದಿಂದ ಬಂದಂತಹ ಕೀರ್ತಿಯುತವಾದ ಶಾಸ್ತ್ರೀಯ ಸಂಗೀತ ಏನಿದೆ ಅದನ್ನು ಮರೆಯುತ್ತಿದ್ದಾರೆ, ಈ ಶಾಸ್ತ್ರೀಯ ಸಂಗೀತದಲ್ಲಿ ಎರಡು ಭಾಗ. ಒಂದು ಉತ್ತರಾದಿ ಮತ್ತೊಂದು ದಕ್ಷಿಣಾದಿ. ಉತ್ತರಾದಿಯೇ ಒಂದು ವಿಧ, ದಕ್ಷಿಣಾಧಿ ಸಂಗೀತಕ್ಕೆ, ತಮಿಳುನಾಡಾಗಿರಬಹುದು, ಕೇರಳವಾಗಿರಬಹುದು, ಆಂಧ್ರವಾಗಿರಬಹುದು ಎಲ್ಲ ಸಂಗೀತಕ್ಕೂ ಕರ್ನಾಟಕೀಯ ಸಂಗೀತವೆಂದು ಹೇಳುತ್ತಾರೆ. ಇಡೀ ದಕ್ಷಿಣ ಭಾರತದ ಸಂಗೀತವನ್ನು ಕರ್ನಾಟಕ ಸಂಗೀತವೆಂದು ಹೇಳುತ್ತಾರೆ. ಇವತ್ತು ಶಾಸ್ತ್ರೀಯ ಸಂಗೀತಕ್ಕೆ ಪ್ರೋತ್ಸಾಹವಿಲ್ಲ. ಯಾವ ಮದುವೆ ಸಮಾರಂಭದಲ್ಲಿ ನೋಡಿ, ಉತ್ತರಾದಿ ಅಥವಾ ಪಾಶ್ಚಾತ್ಯ ಸಂಗೀತದ ಹಾವಳಿ. ರಾಮೋತ್ಸವದಲ್ಲಿಯೂ ಆಧುನಿಕ ಸಂಗೀತದ ದಾಳಿ, ಶಾಸ್ತ್ರೀಯವಾದ ಹೃದಯ ವಿಕಾಸದ ಸಂಗೀತಕ್ಕೆ ಇವತ್ತು ಮಾನ್ಯತೆ ಇಲ್ಲ. ಇವತ್ತು ಸಂಗೀತ ದೇವಸ್ಥಾನಗಳೊಳಗೆ ಇದೆ. ದೇವಸ್ಥಾನಗಳಲ್ಲಿ ಸಂಗೀತವನ್ನು ಪೋಷಣೆ ಮಾಡಿದ್ದಾರೆ, ನೃತ್ಯದಲ್ಲಿ ಆಧುನಿಕತೆ ಒಂದು ಕ್ಯಾಬರೇ ನೃತ್ಯಗಳು ನಮ್ಮ ದೇಶದೊಳಕ್ಕೆ ಬಂದಿದೆ. ಇಂತಹ ಕ್ಷೀಣ ಸ್ಥಿತಿಗೆ ನಾವು ಬಂದಿದ್ದೇವೆ. ಹಿಂದೆ ದೇವಸ್ಥಾನಗಳಲ್ಲಿ ಸಂಗೀತಕ್ಕೆ, ನೃತ್ಯಕ್ಕೆ ಪ್ರೋತ್ಸಾಹ ಇತ್ತು, ವಿಜಯನಗರವನ್ನು ಪುನರುದ್ಧಾರ ಮಾಡುತ್ತೇವೆಂದು ಸರ್ಕಾರ ಹೇಳಿರುವುದನ್ನು ಪತ್ರಿಕೆಗಳಲ್ಲಿ ಓದಿದೆ. ಇದು ಆದರೆ ಬಹಳ ಸಂತೋಷ. ಅಲ್ಲಿ ಒಂದು ವಿಠ್ಠಲವಂದಿರ ಇದೆ. ಅಲ್ಲಿ ಕಲ್ಲಿನ ಕಂಬ ಮಾಡಿದ್ದಾರೆ. ಆ ಕಂಬದಲ್ಲಿ ಏಳೇಳು ಸಣ್ಣ ಕಂಬಗಳು ಇವೆ. ಈ ೭ ಕಂಬಗಳಲ್ಲಿ ಸಪ್ತ ಸ್ವರಗಳು ಹೊರಡುತ್ತವೆ. ಸ, ರಿ, ಗ, ಮ, ಪ ದ ಮತ್ತು ನಿ ಎಂಬ ಸ್ವರಗಳು ಹೊರಡುತ್ತವೆ. ಶಾಸ್ತ್ರೀಯ ಸಂಗೀತ ಬಲ್ಲವನು ಈ ಒಂದೇಕಲ್ಲಿನ ೭ ಕಂಬಗಳನ್ನು ಬಾರಿಸಿದರೆ ೭ ನಾದಗಳು ಬರುತ್ತವೆ. ಈ ಬಗ್ಗೆ ನಾನು ಹೆಚ್ಚು ವಿವರಿಸುವುದಕ್ಕೆ ಹೋಗುವುದಿಲ್ಲ. ಸಪ್ತ ನಾದಮಾಧುರ್ಯದಿಂದ ಕೂಡಿದ ಕಂಬಗಳು ಅವು. ಇಂತಹ ಮಾಧುರ್ಯವನ್ನು ಕಲ್ಲಿನಲ್ಲಿ ಬರಿಸತಕ್ಕಂತಹ, ವಾದ್ಯಗಳ ಸಹಾಯವಿಲ್ಲದೇ ಕಲ್ಲಿನ ಕಂಬದಲ್ಲಿ ಬೆರಳಿಟ್ಟು ಬಾರಿಸತಕ್ಕಂತಹ ಪರಿಸ್ಥಿತಿ ಈ ದೇಶದಲ್ಲಿ ಇತ್ತು. ಇದು ಪವಿತ್ರವಾದ ಕಲೆ, ಇವತ್ತು ಇಂತಹ ಕಲೆಯನ್ನು ಕಲಿಸತಕ್ಕ ಕಲಾವಿದನಿಗೆ ಪ್ರೋತ್ಸಾಹ ಇಲ್ಲ. ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿಕೊಂಡಿದ್ದೆ ಅವರೂ ಕೂಡಾ ಒಪ್ಪಿಕೊಂಡಿದ್ದರು. ಹಿಂದೆ ರಾಜಮಹಾರಾಜರು ಇದ್ದಾಗ, ಚಕ್ರವರ್ತಿಗಳು ಇದ್ದಾಗ ಪ್ರಸಿದ್ಧ ಸಂಗೀತಗಾರರನ್ನು ರಾಜರು ಆಸ್ಥಾನ ವಿದ್ವಾಂಸರಾಗಿ ನೇಮಿಸಿಕೊಳ್ಳುತ್ತಿದ್ದರು. ಎಳೆಯ ಕಲಾವಿದರಿದ್ದರೆ, ಅವರಿಗೆ ಆಶ್ರಯ ಕೊಟ್ಟು, ಪ್ರೋತ್ಸಾಹ ಕೊಟ್ಟು ಜೀವನದಲ್ಲಿ ರಕ್ಷಣೆ ಕೊಟ್ಟು ಅವನನ್ನು ದೊಡ್ಡ ಕಲಾವಿದನನ್ನಾಗಿ ಮಾಡಿ, ದೇಶದ ಹಾಗೂ ರಾಜಾಸ್ಥಾನದ ಕೀರ್ತಿಯನ್ನು ಹೆಚ್ಚಿಸುತ್ತಿದ್ದರು. ಇವತ್ತು ಕರ್ನಾಟಕ ರಾಜ್ಯದಲ್ಲಿ ನಾವು ಯಾಪ ಯಾವುದಕ್ಕೋ ಹಣವನ್ನು ಕೊಡುತ್ತಿದ್ದೇವೆ. ನಮ್ಮ ಸಂಗೀತಗಾರ ಯಾವನೇ ಆಗಿರಲಿ, ಉತ್ತರಾದಿಯಿರಲಿ ದಕ್ಷಿಣಾದಿಯಿರಲಿ, ತಬಲ, ಪಿಟೀಲು ವಾದಕನಾಗಿರಲಿ ವರ್ಷಕ್ಕೆ ಒಬ್ಬರಂತೆ ಆರಿಸಿ ಅವನಿಗೆ ೧ ಸಾವಿರ, ೫೦೦ ರೂಪಾಯಿ ಮಾಸಿಕ ವೇತನ ಕೊಟ್ಟು, ಇವನು ನಮ್ಮ ರಾಜ್ಯದ ಕಲಾವಿದ ಎಂದೇ ಹೇಳಿ, ಕಲಾ ಕೀರ್ತಿವಂತ ಎಂದು ಹೇಳಿ, ಕನ್ನಡದ ಕಲಾವಿದನನ್ನು ನಾವು ಒಮ್ಮೆ ವಿಶ್ವಸಂಸ್ಥೆಗೆ ಕಳುಹಿಸಿ ಸಂಗೀತ ಹಾಡಿಸಿ ಕರ್ನಾಟಕದ ಗೌರವವನ್ನು ಬಿಂಬಿಸತಕ್ಕ, ಪ್ರತಿನಿಧಿಸತಕ್ಕ ಕೆಲಸವನ್ನು ನಾವು ಮಾಡಿಲ್ಲ. ಶ್ರೀಮಾನ್ ಶ್ರೀನಿವಾಸ್ ಅವರು ಸಚಿವರಾಗಿದ್ದಾಗ ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನವನ್ನು ಅಮೇರಿಕಾದಲ್ಲಿ ಪ್ರದರ್ಶಿಸುವುದಕ್ಕೆ ಏರ್ಪಾಟು ಮಾಡಿ ಕನ್ನಡದ ಕೀರ್ತಿಯನ್ನು ಅಮೇರಿಕಾದಲ್ಲಿ ಪ್ರಸಿದ್ಧಿ ಮಾಡತಕ್ಕೆ ಕೆಲಸ ಮಾಡಿದರು. ನಮ್ಮ ರಾಜ್ಯದ ಶ್ರೀಮತಿ ಸುಬ್ಬಲಕ್ಷ್ಮಮ್ಮ ಅವರು ಯು.ಎನ್.ಓ.ಗೆ ಹೋಗಿ ಸಂಗೀತ ಹಾಡಿ ಬಂದಿದ್ದಾರೆ. ಇಂತಹ ಕಲಾವಿದರನ್ನು ಗುರ್ತಿಸಿ ಗೌರವಿಸತಕ್ಕ ಕೆಲಸ ಆಗಿಲ್ಲ. ಇದು ಆಗಬೇಕಾದರೆ, ದೇವಸ್ಥಾನಗಳಿಗೆ ಒಂದು ಆಡಳಿತ ಸಂಸ್ಥೆಯನ್ನು ರಚಿಸಿ ಪ್ರತಿವಾರವೂ ಕೂಡಾ ಅಲ್ಲಿ ಶಾಸ್ತ್ರೀಯ ಸಂಗೀತ ಕಛೇರಿಗೆ ಕಥಾಕಾಲಕ್ಷೇಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಹಾಗೂ ಭರತ ನಾಟ್ಯಕ್ಕೆ ಅವಕಾಶ ಮಾಡಿಕೊಡಬೇಕು. ಸರ್ಕಾರ ಈ ಬಗ್ಗೆ ಗಮನಹರಿಸಬೇಕು. ಸರ್ಕಾರ ವರ್ಷಕ್ಕೆ ಒಬ್ಬೊಬ್ಬ ಕಲಾವಿದರಿಗೆ ಪ್ರೋತ್ಸಾಹ ಕೊಡತಕ್ಕ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಈ ಸಂಪತ್ತನ್ನು ಕಳೆದುಕೊಂಡರೆ ಏನೂ ಉಳಿಯುವುದಿಲ್ಲ. ನೀವು ಕಟ್ಟುತಕ್ಕ ಭವನಗಳು ಉಳಿಯುವುದಿಲ್ಲ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ನೀವು ಕಟ್ಟಿದಂತಹ ಅಣೆಕಟ್ಟುಗಳು ೧೦ ವರ್ಷದಲ್ಲಿ ದುರಸ್ತಿಗೆ ಬಂದು ಮತ್ತೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಸಿಮೆಂಟ್ ಹಾಕದೇ ಬರೀ ಮರಳಿನಿಂದ ಕಟ್ಟಿ ಹಾಳಾಗುತ್ತಿರುವ ಅಣೆಕಟ್ಟು

ಗಳಿಗೆ ಇವತ್ತು ಹಣ ಹಾಕಲಾಗುತ್ತಿದೆ. ಎಂದೂ ಒಡೆಯಲಾರದಂತಹ ಸಂಸ್ಕೃತಿ ಇದು. ಎಂದೂ ನಷ್ಟವಾಗದಂತಹ ಸಂಸ್ಕೃತಿ ಇದು. ಇಂತಹ ಸಂಸ್ಕೃತಿಯನ್ನು ಉಳಿಸತಕ್ಕ ಪ್ರಯತ್ನವನ್ನು ದೇಶದಲ್ಲಿ ಮಾಡಬೇಕಾಗಿದೆ. ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಸಂಗೀತ ಕಥಾಕಾಲಕ್ಷೇಪಗಳು ಪ್ರತಿದಿನ ದೇವಸ್ಥಾನಗಳಲ್ಲಿ ನಡೆಯಬೇಕು, ನಾನು ಸರ್ಕಾರದಲ್ಲಿ ಮನವಿ ಮಾಡಿಕೊಂಡ ಪ್ರಯುಕ್ತ ದಸರಾ ಸಮಯದಲ್ಲಿ ಅರಮನೆಯಲ್ಲಿ ಸಂಗೀತ ಕಾರ್ಯಕ್ರಮ ನಡೆಯುತ್ತಿದೆ. ಜಗನ್ಮೋಹನ ಪ್ಯಾಲೆಸ್‌ನಲ್ಲಿ ನಡೆಯುತ್ತಿದೆ. ಹಾಗೂ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಡೆಸುವುದಕ್ಕೆ ಸರ್ಕಾರ ಏರ್ಪಾಟು ಮಾಡಿದೆ. ಇಡೀ ರಾಜ್ಯದ ದೇವಸ್ಥಾನಗಳಲ್ಲಿ, ಹೆಚ್ಚು ಜನರನ್ನು ಆಕರ್ಷಣೆ ಮಾಡತಕ್ಕ ದೇವಸ್ಥಾನದಲ್ಲಿ ಹಾಡುವ ಸಂಗೀತಗಾರರಿಗೆ ಬಹಳ ಹಣ ಕೊಡಿ ಎಂದು ನಾನು ಹೇಳುವುದಿಲ್ಲ. ದೇವಸ್ಥಾನದಲ್ಲಿ ಸಂಗೀತ ಹಾಡಲು ಅತ್ಯಲ್ಪ ಹಣ ಕೊಟ್ಟರೂ ತಯಾರಾಗಿ ಇರುತ್ತಾರೆ. ದೇವರ ಮುಂದೆ ಹಾಡಬೇಕೆಂದು, ನೃತ್ಯ ಮಾಡಬೇಕೆಂಬ ಅಭಿಮಾನ ಇರುವ ಜನರು ಇದ್ದಾರೆ. ಈ ಬಗ್ಗೆ ಒಂದು ನಿದರ್ಶನವನ್ನು ಹೇಳಬೇಕೆಂದರೆ, ತಾನ್ಸೇನ್ ಒಬ್ಬ ಪ್ರಸಿದ್ಧ ಸಂಗೀತಗಾರ. ಈತ ಅಕ್ಬರ್ ಆಸ್ಥಾನದಲ್ಲಿ ಗಾಯಕನಾಗಿದ್ದನು. ಈತ ಒಂದು ದಿನ ಹಾಡುತ್ತಿದ್ದಾಗ, ನಿಮ್ಮ ಗುರು ಯಾರೆಂದು ಈತನನ್ನು ಅಕ್ಬರ್ ಕೇಳಿದಾಗ, ಹರಿದಾಸ ಎನ್ನುವವರು ನನ್ನ ಗುರು ಎಂದು ಹೇಳುತ್ತಾನೆ. ನೀನೇ ಇಷ್ಟು ಚೆನ್ನಾಗಿ ಹಾಡುತ್ತಿರುವಾಗ ನಿನ್ನ ಗುರು ಇನ್ನೆಷ್ಟು ಚೆನ್ನಾಗಿ ಹಾಡಬಹುದು, ಅದನ್ನು ಕೇಳಬೇಕಲ್ಲಾ ಎನ್ನುತ್ತಾನೆ, ನಿನ್ನ ಗುರುವನ್ನು ಕರೆದುಕೊಂಡು ಬರುವೆಯಾ ಎಂದಾಗ, ಆತ, ನನ್ನ ಗುರು ಬರುವುದಿಲ್ಲ ಎಂದು ಹೇಳುತ್ತಾನೆ. ಹಾಗಾದರೆ ನಾನೆ ನಿನ್ನ ಗುರು ಇರುವ ಕಡೆಗೆ ಬರುತ್ತೇನೆ ಕರೆದುಕೊಂಡು ನಡಿ ಎನ್ನುತ್ತಾನೆ. ಆಗ ತಾನ್ಸೇನ್, ನೀವು ಈ ವೈಭವದಿಂದ ಅಲ್ಲಿಗೆ ಬರಬಾರದು, ನನ್ನಂತೆ ನಡೆದುಕೊಂಡು ನನ್ನ ಜೊತೆ ಬಂದರೆ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆಂದು ಹೇಳುತ್ತಾನೆ. ಅದಕ್ಕೆ ಒಪ್ಪಿದ ಅಕ್ಬರ್ ಆತನ ಜೊತೆ ನಡೆದುಕೊಂಡು ಹೋಗುತ್ತಾನೆ. ಆತನ ಗುರು ಕಾಡಿನೊಳಗೆ ಒಂದು ಗುಡಿಸಲಿನಲ್ಲಿ ಇದ್ದು, ಅಲ್ಲಿ ಅಂತರ್ಧ್ಯಾನನಾಗಿರುತ್ತಾನೆ. ಅಲ್ಲಿ ಎಷ್ಟು ಹೊತ್ತು ಕಾದು ಕುಳಿತರೂ ಆತನ ಗುರು ಸಂಗೀತವನ್ನು ಹಾಡುವುದಿಲ್ಲ. ಏನು ಮಾಡುವುದು, ನಿರಾಶೆಯಿಂದ ವಾಪಸ್ ಹೋಗಬೇಕಲ್ಲಾ, ಎಂದು ಅಕ್ಬರ್ ಯೋಚಿಸುತ್ತಾ ಇರುವಾಗ ತಾನ್ಸೇನ್ ತನಗೆ ಗೊತ್ತಿದ್ದರೂ ರಾಗಕ್ಕೆ ವಿಕೃತ ರಾಗವನ್ನು ಸೇರಿಸಿ ಸಂಗೀತವನ್ನು ಹಾಡುತ್ತಾನೆ. ಆಗ ಅಂತರ್ಧ್ಯಾನರಾಗಿದ್ದ ಆತನ ಗುರು ಬಹಿರ್ಮುಖರಾಗಿ, ೨ ತಂತಿಗಳು ಉಳ್ಳದು ತಾರ್‌ವಾದನವನ್ನು ತೆಗೆದುಕೊಂಡು ಆ ರಾಗವನ್ನು ಬಾರಿಸುತ್ತಾ ಹಾಡಿದ್ದನ್ನು ಅಕ್ಬರ್ ತಲ್ಲೀನನಾಗಿ ಕೇಳುತ್ತಾನೆ, ಇದನ್ನು ಕೇಳಿ ಸಾಷ್ಟಾಂಗ ನಮಸ್ಕಾರ ಮಾಡಿದಾಗ, ನಿನಗೇನು ಬೇಕೆಂದು ಕೇಳುತ್ತಾರೆ. ಆಗ ಆದಕ್ಕೆ ನನಗೆ ಬೇಕಾದ ದೇವರನ್ನು ನಾನು ಪಡೆದಿದ್ದೇನೆಂದು ಹೇಳಿದರು. ಆ ನಂತರ ಅಕ್ಬರ್ ತಾನ್ಸೇನನನ್ನು ಕರೆದು, ಏನು ನೀನು ಅಷ್ಟೊಂದು ವಾದ್ಯಗಳನ್ನು ಇಟ್ಟುಕೊಂಡು ನನ್ನ ಪೋಷಣೆಯಲ್ಲಿ ಹಾಡುತ್ತೀಯೇ ಆದರೆ ನಿನ್ನ ಗುರು ಕೇವಲ ಕಾಡಿನ ವಾದನ ದಂತಾರ ಇಟ್ಟುಕೊಂಡು ಹಾಡಿದ್ದನ್ನು ಕೇಳಿದ್ದೇನೆ. ಆದರೆ ನಿನ್ನ ಗುರು ಹಾಡಿದ್ದರಲ್ಲಿ ಇರುವ ಮಾಧುರ್ಯವನ್ನು ನಾನು ಎಂದೂ ಕೇಳಿಲ್ಲ ಎನ್ನುತ್ತಾನೆ. ಅದಕ್ಕೆ ತಾನ್‌ಸೇನ್ ಹೇಳುತ್ತಾನೆ, ಬಾದಶಹರೇ, ನಾನು ಹಾಡುತ್ತಿರುವುದು ನನ್ನ ಹಾಗೆ ಒಂದಲ್ಲಾ ಒಂದು ದಿನ ಮಣ್ಣಿನಲ್ಲಿ ಕೂಡಿ ಹೋಗತಕ್ಕಂತಹಾ, ಸತ್ತು ಹೋಗತಕ್ಕಂತಹ ಬಾದಶಹರಿಗೆ ಹಾಡುತ್ತಿದ್ದೇನೆ, ಆ ನನ್ನ ಗುರು ಹಾಡಿದ್ದು ಎಂದೂ ಸಾಯದೇ ಇರತಕ್ಕ, ಅಮರನಾಗಿರತಕ್ಕಂತಹ ಬಾದಶಹ, ಜಗತ್ತಿನ ಬಾದಶಹನಾದ ಭಗವಂತನನ್ನು ಒಪ್ಪಿಸುವುದಕ್ಕೆ ಹಾಡಿದ್ದಾರೆ. ಆದ್ದರಿಂದ ಆ ಮಾಧುರ್ಯ ಅಲ್ಲಿ ಇದೆ ಎಂದು ಹೇಳಿದರು. ಸಂಗೀತ ಹಾಡತಕ್ಕ ಕಲಾವಿದರನ್ನು, ನೃತ್ಯಮಾಡುವ ಕಲಾವಿದರನ್ನು ಗುರುತು ಮಾಡಿ, ಭಗವಂತನನ್ನು ಮೆಚ್ಚಿಸತಕ್ಕ ಕಲೆಯನ್ನು ಬೆಳೆಸಿದರೆ, ಕಲೆ, ವೈಭವ ಪೂರ್ಣವಾಗಿ, ತತ್ವ ಪೂರ್ಣವಾಗಿ ಬೆಳೆಯುತ್ತದೆ. ಇವತ್ತು ನಾವು ಏನು ಮಾಡುತ್ತಿದ್ದೇವೆ ? ಅರ್ಥವಾಗದೇ ಜನರು, ಸಂಸ್ಕೃತಿಯನ್ನು ಕೀಳುಮಟ್ಟಕ್ಕೆ ಇಳಿಸುತ್ತಿದ್ದಾರೆ. ಶ್ರೀಮಾನ್ ಹನುಮಂತಯ್ಯನವರು ಸಂಸ್ಕೃತಿ ಪ್ರಸಾರ ಕಾರ್ಯವನ್ನು ಮಾಡುತ್ತಿದ್ದರು. ಈ ಬಗ್ಗೆ ಕೇವಲ ಸ್ವಲ್ಪ ಹಣ ಖರ್ಚಾಗುತ್ತದೆ. ಬಹಳ ಗ್ರಾಮಗಳಲ್ಲಿ ನೀತಿಯುತ ವಾದ, ಪ್ರಚೋದನಾತ್ಮಕವಾದ ಕೆಲಸಗಳಾಗುತ್ತಿದ್ದವು. ನನ್ನ ಅನುಭವವನ್ನೇ ಹೇಳುತ್ತೇನೆ. ಈ ಒಂದು ಸಂಸ್ಕೃತ ಪ್ರಸಾರದ ಭಾಷಣದಲ್ಲಿ ನಾನು ಒಂದು ಗ್ರಾಮಕ್ಕೆ ಭಾಷಣಕಾರನಾಗಿ ಹೋಗಿದ್ದೆ. ಒಂದು ಸಾರಿ ಸಭೆಯಲ್ಲಿ ಹರಿಶ್ಚಂದ್ರ ಕಾವ್ಯದ ಪಠಣವಾಯಿತು. ಹರಿಶ್ಚಂದ್ರನ ಕಾಲದ ಕೆಲವು ಅಂಶಗಳ ಮೇಲೆ ಭಾಷಣ ಮಾಡುತ್ತಿದ್ದೆ. ಆಗ ಒಬ್ಬ ಮುಗ್ಧ ಮನುಷ್ಯ ದಿಕ್ಕೆಟ್ಟವನಂತೆ ದಿಫ್ಫ್ರಮೆ

ಗೊಂಡ. ಏತಕ್ಕೆ ಹೀಗಾದನೆಂದು ಆತನನ್ನು ವಿಚಾರಿಸಲಾಗಿ, ನಾನು ಹರಿಶ್ಚಂದ್ರನ ವರ್ಣನೆ ಮಾಡುತ್ತಿದ್ದಾಗ, ಆತನು, ತಾನು ಏನೋ ದೋಷ ಮಾಡಿದ್ದೇನೆಂದೂ, ಯಾರಿಗೂ ಹೇಳಿಕೊಳ್ಳಲಾರದ ಅನಾಚಾರ ಮಾಡಿದ್ದೇನೆಂದು, ಆದಕ್ಕಾಗಿ ತಮ್ಮ ಭಾಷಣವನ್ನು ಕೇಳಿದ ಮೇಲೆ ದುಃಖಿತನಾಗಿದ್ದೇನೆಂದು ಹೇಳಿದ. ಹೀಗೆ ಸಾವಿರಾರು ಜನರ ಮನಸ್ಸಿನ ಮೇಲೆ ಪರಿಣಾಮ ಆದುದೂ ಇದೆ. ಕವಿಯಿಂದ ಒಳ್ಳೆಯ ವಿಷಯಗಳನ್ನು ಕೇಳಿದರೆ ಇಂತಹ ಒಬ್ಬ ಮಾರ್ಮಿಕನಾದರೂ ಸತ್ಪುರುಷನಾಗುವ ಅವಕಾಶ ಇದೆ.

೧೨-೦೦ ಎ.ಎಂ.

ಹರಿಶ್ಚಂದ್ರ ಮಹಾಕಾವ್ಯವನ್ನು ಓದಿ ಹರಿಶ್ಚಂದ್ರ ನಾಟಕವನ್ನು ನೋಡಿ ಮಹಾತ್ಮ ಗಾಂಧೀಜಿಯವರು ಸತ್ಪುರುಷರಾದರು. ಸತ್ಯ ಸಂತೋಧಕರಾದರು. ಇವತ್ತು ಚಲನಚಿತ್ರ ಮಾಧ್ಯಮದ ಮೂಲಕ ಸಾಧು ಸತ್ಪುರುಷರ ಜೀವನ ಚರಿತ್ರೆಯನ್ನು ತೋರಿಸುವಂತಹ ವ್ಯವಸ್ಥೆ ಮಾಡಲಿಲ್ಲ. ಇವತ್ತು ೫೦,೦೦೦ ರೂಪಾಯಿನಿಂದ ಒಂದು ಲಕ್ಷ ರೂಪಾಯಿಗಳವರೆಗೆ ಚಲನ ಚಿತ್ರಗಳಿಗೆ ಸಬ್ಸಿಡಿ ಕೊಡುತ್ತಿದ್ದೀರಿ. ಸರ್ಕಾರದವರು ಕೊಡುವಂತಹ ಹಣವನ್ನು ಪಡೆದು ತೆಗೆಯುವಂತಹ ಚಿತ್ರಗಳಾದರೂ ಯಾವ ಮಟ್ಟದಲ್ಲಿರಬೇಕೆ ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಿದ್ದಾರೆಯೇ? ಮೊನ್ನೆ ಪ್ರಜಾವಾಣಿ ಮುಖಪುಟದಲ್ಲಿ ಒಂದು ಸುದ್ದಿಯನ್ನು ನೋಡಿದೆ. ಬೆಂಗಳೂರಿನಲ್ಲಿ ಶ್ರೀ ಚಂದ್ರಶೇಖರ್ ಎಂಬುವರ ಮನೆಯಲ್ಲಿ ಕಳ್ಳತನವಾಯಿತು? ಇನ್ನೊಂದು ಕಡೆ ದರೋಡೆ ಆಯಿತು. ಇನ್ನೊಂದು ಕಡೆ ಹೆಣ್ಣು ಮಕ್ಕಳ ಕೊರಳಲ್ಲಿರುವಂತಹ ಮಾಂಗಲ್ಯವನ್ನು ಹೊಡೆದುಕೊಂಡು ಹೋದರು ಎನ್ನುವ ಸುದ್ದಿಗಳನ್ನು ನೋಡುತ್ತಿರುತ್ತೇವೆ. ಇದಕ್ಕೆ ಕಾರಣ ಇಂದಿನ ಚಲನಚಿತ್ರಗಳೇ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಪತ್ರಿಕೆಯಲ್ಲಿ ಬಂದಿರುವಂತೆ ಕಾರ್ಮಿಕ ಕಳ್ಳನಲ್ಲ ಎನ್ನುವ ಚಿತ್ರವನ್ನು ನೋಡಿದ ಮೇಲೆ ಕಳ್ಳತನ ಮಾಡುವಂತಹ ಮನಸ್ಸು ಬಂತು ಎಂದು ಆರೋಪಿ ಹೇಳಿದ್ದಾನೆ. ೫೦,೦೦೦ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ನಮ್ಮ ಮಕ್ಕಳಿಗೆ ಇಂಥ ಚಿತ್ರಗಳನ್ನು ತೋರಿಸುವುದರಿಂದ ದಿಕ್ಕೆಟ್ಟು ಹೋಗುತ್ತಾರೆ. ಇಂದಿನ ಸಿನಿಮಾಗಳಲ್ಲಿ ತೋರಿಸುವಂತಹ ದೃಷ್ಯಗಳಾದರೂ ಏನು? ಹೆಣ್ಣು ಮಕ್ಕಳ ಸೀರೆ ಎಳೆಯುವುದು ಸೆರಗು ಎಳೆಯುವುದು. ದೇವಸ್ಥಾನಗಳಲ್ಲಿ ಇರುವಂತಹ ಒಡವೆಗಳನ್ನು ದೋಚುವುದು, ಕೊಲೆ ಮಾಡುವುದು ಇದರಿಂದ ನಮ್ಮ ಮಕ್ಕಳು ಉತ್ತಮ ಪ್ರಜೆಗಳಾಗುವುದಕ್ಕೆ ಸಾಧ್ಯವೆ? ಬ್ಯಾಂಕಂಗಳನ್ನು ದರೋಡೆ ಮಾಡುವಂತಹ ಚಲನಚಿತ್ರಗಳನ್ನು ತೋರಿಸುವುದರಿಂದ ನಮ್ಮಲ್ಲಿ ಒಳ್ಳೆಯ ಸಮಾಜವನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲ. ತಂದೆ ತಾಯಿಗಳು ನಮ್ಮ ಮಗ ಪದವೀಧರನಾಗಿ ಬಂದು ಸಂಪಾದನೆ ಮಾಡಿ ನಮ್ಮ ಕಷ್ಟ ಸುಖಗಳಲ್ಲಿ ನೆರವಾಗುತ್ತಾನೆಂಬ ಆಸೆಯಿಂದ ಇರುತ್ತಾರೆ. ಆದರೆ, ಇಂದಿನ ಸಿನಿಮಾ ಜಗತ್ತಿನಲ್ಲಿ ನಮ್ಮ ಮಕ್ಕಳು ದಾರಿ ತಪ್ಪಿ ಹೋಗುವುದನ್ನು ನಾವು ನೋಡುತ್ತಿದ್ದೇವೆ. ಆದಕ್ಕೋಸ್ಕರ ಸರ್ಕಾರದವರು ಸಮಾಜಕ್ಕೆ ಮಾರಕವಾಗಿರುವಂತಹ ಚಿತ್ರಗಳು ಬರುವುದನ್ನು ತಪ್ಪಿಸಿ ಮಕ್ಕಳಲ್ಲಿ ಸದ್ಭಾವನೆ ಬರತಕ್ಕ ಸತ್ಪುರುಷರ ಚಿತ್ರಗಳನ್ನು ತೆಗೆಯುವುದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವಂತಹ ವ್ಯವಸ್ಥೆ ಮಾಡಿ, ಇಂದಿನ ಮಕ್ಕಳು ಮುಂದಿನ ಸತ್ಪ್ರಜೆಗಳಾಗಿ ಸಮಾಜದಲ್ಲಿ ಬಾಳುವಂತಹ ಅವಕಾಶವನ್ನು ಕಲ್ಪಿಸಿಕೊಡುವ ವಿಚಾರ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿ ಅನೇಕ ದೇವಸ್ಥಾನಗಳು ಇವೆ. ಐತಿಹಾಸಿಕ ಸ್ಥಳಗಳು ಇವೆ, ದೇವಸ್ಥಾನಗಳ ಸ್ಥಿತಿಗತಿ ಬಗ್ಗೆ, ಐತಿಹಾಸಿಕ ಸ್ಥಳಗಳ ಸ್ಥಿತಿಗತಿಗಳ ಬಗ್ಗೆ ಈ ಸದನದ ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ, ಒಂದು ವರದಿಯನ್ನು ಕೊಡುವಂತೆ ವ್ಯವಸ್ಥೆ ಮಾಡಿಸಿ ಇಂಗ್ಲೆಂಡ್‌ನಲ್ಲಿ ಪಾಲ್ ಹ್ಯಾಮ್‌ಲಿನ್ ಎನ್ನುವವರು ಇಂಥ ಒಂದು ಕೆಲಸವನ್ನು ಮಾಡಿಟ್ಟಿದ್ದಾರೆ. ಲಂಡನ್, ನ್ಯೂಯಾರ್ಕ್‌ನಲ್ಲಿರತಕ್ಕ ದೇವಸ್ಥಾನಗಳ ಬಗ್ಗೆ ಒಂದು ಪುಸ್ತಕವನ್ನು ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಇಂಥ ಒಂದು ಕೆಲಸವನ್ನು ಮಾಡಿಲ್ಲ. ನ್ಯಾಷನಲ್ ಬುಕ್ ಟ್ರಸ್ಟ್‌ನವರು ಟೆಂಪಲ್ಸ್ ಆಫ್ ನಾರ್ತ ಇಂಡಿಯಾ ಎನ್ನುವ ಪುಸ್ತಕವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ನಮ್ಮ ದೇವಸ್ಥಾನಗಳ ವರ್ಣನೆ ಸೌಂದರ್ಯಗಳನ್ನು ವಿಶ್ಲೇಷಣೆ ಮಾಡಿದ್ದಾರೆ, ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಕೂಡ ದೇವಸ್ಥಾನಗಳ ಬಗ್ಗೆ, ಇತಿಹಾಸದ ಬಗ್ಗೆ ಸಂಶೋಧನೆ ನಡೆಸಿ, ಸಮಗ್ರವಾದ ಕೃತಿಯನ್ನು ರಚಿಸುವುದಕ್ಕೆ ಪ್ರೋತ್ಸಾಹ ಕೊಡಿ, ಅಲ್ಲದೆ ಎಲ್ಲಾ ದೇವಸ್ಥಾನಗಳ ಚಿತ್ರ, ಇತಿಹಾಸವನ್ನು ಒಳಗೊಂಡಂತೆ ಪುಸ್ತಕವನ್ನು ಪ್ರಕಟಿಸಬೇಕೆಂದು ಹೇಳುತ್ತೇನೆ ಜೊತೆಗೆ ಪ್ರತಿಯೊಂದು ದೇವಸ್ಥಾನಗಳು ಪಾಯಂ ಆಗಿ, ಕಾನೂನು ಬದ್ಧವಾಗಿ ದೇವಸ್ಥಾನಗಳ ಆಡಳಿತ ಮಂಡಲಿಗಳಿಗೆ ಒಳಪಡಿಸುವಂತಹ ವ್ಯವಸ್ಥೆ ಮಾಡಿ, ನಾಡಿನ ಪ್ರಜೆಗಳಲ್ಲಿ ಮತ್ತು ಮಕ್ಕಳಲ್ಲಿ

ಸದ್ಭಾವನೆ ಮೂಡಿಸುವಂತಹ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ.ಕೆ.ಬಿ. ಶಿವಯ್ಯ (ನಂಜನಗೂಡು) :—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸ್ನೇಹಿತರಾದಂತಹ ಶ್ರೀ ಗಂಗಾಧರನ್ ರವರ ವಿಚಾರ ಪೂರಿತವಾದಂತಹ ಭಾಷಣವನ್ನು ನಾನು ಕೇಳಿದ್ದೇನೆ. ಮಾನ್ಯ ಗಂಗಾಧರನ್ ಅವರ ದಾಟಿಯಲ್ಲಿ ನನಗೆ ಮಾತನಾಡುವುದಕ್ಕೆ ಬಾರದೇ ಹೋದರೂ ಕೂಡ ಕರ್ನಾಟಕ ದೇವಸ್ಥಾನಗಳೂ ಮತ್ತು ರಾಜ್ಯದಲ್ಲಿರತಕ್ಕ ದೇವಸ್ಥಾನಗಳೂ ಮತ್ತು ದೇವಸ್ಥಾನಗಳಿಗೆ ಸೇರಿದಂತಹ ಆಸ್ತಿ ಪಾಸ್ತಿಗಳ ಬಗ್ಗೆ ಮತ್ತು ದೇವಸ್ಥಾನಗಳನ್ನು ಉಳಿಸಿಕೊಳ್ಳುವ ಬಗ್ಗೆ ಒಂದೆರಡು ಮಾತುಗಳನ್ನು ಮಾತ್ರ ಪ್ರಸ್ತಾಪ ಮಾಡಬೇಕೆಂದುನಾನು ತಮ್ಮ ಮುಂದೆ ನಿಂತಿದ್ದೇನೆ. ಕೆಲವು ದೇವಸ್ಥಾನಗಳ ಆಡಳಿತ ವ್ಯವಸ್ಥೆಯನ್ನು ಸರ್ಕಾರದವರೇ ಅಧಿಕಾರಿಗಳನ್ನು ನೇಮಿಸಿಕೊಂಡು ಮಾಡುತ್ತಿದ್ದಾರೆ. ಕೆಲವು ಸಣ್ಣಪುಟ್ಟ ದೇವಸ್ಥಾನಗಳ ಆಡಳಿತ ವ್ಯವಸ್ಥೆ ಹೇಗೆ ನಡೆಯುತ್ತಿದೆ? ದೇವಸ್ಥಾನಗಳಿಗೆ ಸೇರಿದಂತಹ ಆಸ್ತಿ ಪಾಸ್ತಿಗಳನ್ನು ಕಬಳಿಸಕ್ಕ ಸಂಚು ನಡೆಯುತ್ತಿದೆ. ದೊಡ್ಡ ದೇವಸ್ಥಾನಗಳಾದ ಮಹದೇಶ್ವರ ದೇವಸ್ಥಾನ, ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನ ಧರ್ಮದರ್ಶಿಗಳ ನೇತೃತ್ವದಲ್ಲಿ ನಡೆದರೂ ಕೂಡ ಅನೇಕ ಲೋಪದೋಷಗಳು ಇವೆ. ಹಾಗೂ ಹೀಗೂ ಅಲ್ಲಿ ಹಣ ಸೋರಿಹೋಗುವುದು ಮುಂದುವರಿಯುತ್ತಲೇ ಇದೆ. ಇದನ್ನು ತಡೆಗಟ್ಟಿದರೆ, ಇನ್ನು ಹೆಚ್ಚಿನ ವರಮಾನವನ್ನು ನೋಡಬಹುದು. ೧೫–೧೬ ಲಕ್ಷ ರೂಪಾಯಿಗಳ ವರಮಾನ ನಂಜನಗೂಡಿನ ದೇವಸ್ಥಾನದಲ್ಲಿದೆ, ೩೦ ಲಕ್ಷ ರೂಪಾಯಿಗಳ ವರಮಾನ ಮಹದೇಶ್ವರ ದೇವಸ್ಥಾನದಲ್ಲಿದೆ. ಕರ್ನಾಟಕ ರಾಜ್ಯದಲ್ಲಿರತಕ್ಕ ದೊಡ್ಡ ದೊಡ್ಡ ದೇವಸ್ಥಾನಗಳಲ್ಲಿ ಲಕ್ಷಗಟ್ಟಲೆ ಆದಾಯ ಇದೆ. ಮಾನ್ಯ ಗಂಗಾಧರನ್‌ರವರು ಹೇಳಿದಂತೆ ದೇವಸ್ಥಾನಗಳು ಇರತಕ್ಕ ಸ್ಥಳಗಳಲ್ಲಿ ಜನೋಪಯುಕ್ತವಾದಂತಹ ಕೆಲಸಕಾರ್ಯಗಳನ್ನು ಮಾಡಿದರೆ, ಇನ್ನೂ ಹೆಚ್ಚು ವರಮಾನ ಬರುವುದರಲ್ಲಿ ಅನುಮಾನ ಇಲ್ಲ. ನಮ್ಮ ಜನತೆಗೆ ದೇವಸ್ಥಾನಗಳಲ್ಲಿ ಪೂರ್ವದಿಂದಲೂ ಒಂದು ನಂಬಿಕೆ ಇದೆ. ಅದನ್ನು ಉಳಿಸಿಕೊಂಡು ಹೋಗುವಂತಹ ಕಾರ್ಯಕ್ರಮಗಳನ್ನು ಮಾನ್ಯ ಮುಜರಾಯಿ ಮಂತ್ರಿಯವರು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ, ಇವತ್ತು ದೇವಸ್ಥಾನಗಳ ಆಸ್ತಿಯನ್ನು ಸ್ವಂತ ಆಸ್ತಿಯೆಂದು ಪರಿಗಣಿಸಿ ಅದನ್ನು ಉಳಿಸತಕ್ಕ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕು. ಅಲ್ಪ ಸಂಖ್ಯಾತ ಮುಸ್ಲಿಂ ಬಾಂಧವರಿಗೆ ವಕ್ಫ್ ಮಂಡಲಿ ಇದೆ. ಅದು ಎಲ್ಲಾ ಮಟ ದಲ್ಲೂ ಚೆನ್ನಾಗಿ ಕೆಲಸ ಮಾಡಿಕೊಂಡು ಬರುತ್ತಿದೆ, ಒಂದು ಇಂಚು ಭೂಮಿಯನ್ನು ಅದು ಬಿಡುವುದಕ್ಕೆ ತಯಾರಿಲ್ಲ. ಅನೇಕ ಸಂಸ್ಥೆಗಳ ಮೂಲಕ ಅದು ವಕ್ಫ್ ಮಂಡಲಿಗೆ ಸೇರಿದ ಆಸ್ತಿಪಾಸ್ತಿಗಳನ್ನು ಕಾಪಾಡಿಕೊಂಡು ಹೋಗುತ್ತಿದೆ.

ಅದು ಶ್ಲಾಘನೀಯವಾದುದು. ಆದರೆ ನಮ್ಮ ಹಿಂದೂ ಸಮಾಜದ ದೇವಾಸ್ಥಾನಗಳಲ್ಲಿ ಅಶ್ರದ್ಧೆ ಇದೆ. ಯಾವ ದೇವಸ್ಥಾನಗಳನ್ನು ತೆಗೆದುಕೊಂಡರೂ ನನಗೆ ಸಂಬಂಧವಿಲ್ಲ ಎಂದು ಹೇಳುತ್ತಾರೆ. ಒಂದು ದೇವಸ್ಥಾನದಲ್ಲಿ ದೊಡ್ಡ ಕಳ್ಳತನವಾದರೂ ಕಂಪ್ಲೇಂಟನ್ನೂ ಕೂಡ ಕೊಡಲಿಕ್ಕೆ ಜನ ಮುಂದೆ ಬರುವುದಿಲ್ಲ. ದೇವರು ನೋಡಿಕೊಳ್ಳುತ್ತಾನೆ, ದೇವರ ಸ್ವತ್ತು ಹೋದರೆ ಹೋಯಿತು ಎನ್ನುವ ಭಾವನೆ ಇವತ್ತು ನಮ್ಮಲ್ಲಿದೆ, ಸಂಬಂಧಪಟ್ಟ ಪೋಲೀಸ್ ಇಲಾಖೆಯವರೂ ಕೂಡ ದೇವರ ಸ್ವತ್ತು ಹೋಗಲಿ ಬಿಡಿ ಏನು ಪತ್ತೆ ಹೆಚ್ಚುವುದು ಎಂದು ಹೇಳುವವರೆಗೂ ಹೋಗಿದ್ದಾರೆ. ನಮ್ಮಲ್ಲಿ ಈ ರೀತಿ ನಡೆದಿದೆ. ದೇವರ ಅಭಿಷೇಕಕ್ಕೆ ನೀರು ತರುತ್ತಿದ್ದ ಒಂದು ದೊಡ್ಡ ಬೆಳ್ಳಿ ಚೆಂಬನ್ನು ಹೊಡೆದುಕೊಂಡು ಹೋದರು. ಅದನ್ನು ಪತ್ತೆಹಚ್ಚಲಿಕ್ಕೆ ಎಷ್ಟೋಸಾರಿ ಒತ್ತಾಯ ಮಾಡಿದರೂ, ಅದು ದೇವಸ್ಥಾನದ್ದು ಇದೆ, ಯಾರದೇ ಆಗಲಿ ನಿಮ್ಮ ಕರ್ತವ್ಯವನ್ನು ನೀವು ಮಾಡಿ ಎಂದು ಹೇಳಿದರೂ ಪತ್ತೆ ಹಚ್ಚಬೇಕಾದರೆ, ಅದನ್ನು ತಂದು ಕೇಸ್ ಹಾಕಬೇಕಾದರೆ ವರ್ಷಗಟ್ಟಲೆ ತೆಗೆದುಕೊಂಡರು. ಯಾರೂ ಬಂದು ಒತ್ತಾಯ ಮಾಡುವವರು ಇಲ್ಲ. ಪೋಲೀಸರಿಗೆ ಮಾಮೂಲಿಯಂತೆ ಮಾಡಲಿಕ್ಕೆ ದೇವರು ಬಂದು ಹೋಗುವುದಿಲ್ಲ. ಅವರಿಗೆ ಏನು ಸಲ್ಲುಬೇಕೋ ಅದು ಸಲ್ಲುವುದಕ್ಕೆ ಆಗುತ್ತಾ ಇಲ್ಲ. ಆದುದರಿಂದ ದೇವರ ಬೆಳ್ಳಿ ಚಂಬು ಹೋದರೆ ಏನು, ಮಡಕೆಯಲ್ಲಿ ನೀರು ತಂದು ಹಾಕಿರಿ ಎನ್ನು ಭಾವನೆ ಬಂದಿದೆ. ಇಷ್ಟು ಅಶ್ರದ್ಧೆ ಇವತ್ತು ಇರುವುದು ನಮ್ಮ ಹಿಂದು ವೀಕ್‌ನೆಸ್ ಅಥವಾ ದುರ್ಬಲತೆ. ನಮ್ಮ ಧರ್ಮದಲ್ಲಿ, ಹಿಂದೂ ಸಂಸ್ಕೃತಿಯಲ್ಲಿ ಎಷ್ಟರಮಟ್ಟಿಗೆ ಕಳಕಳಿ ಇದೆ ಎನ್ನುವುದು ಇದು ತೋರಿಸುತ್ತದೆ. ಸಣ್ಣ ದೇವಸ್ಥಾನವಾಗಲಿ, ದೊಡ್ಡ ದೇವಸ್ಥಾನವಾಗಲಿ ಯಾವುದೇ ದೇವಸ್ಥಾನವಾಗಲಿ ಆಡಳಿತವನ್ನು ಮಾಡತಕ್ಕೆ ಕ್ರಮ ಸರಿಯಾಗಿರಬೇಕು ಮತ್ತು ಅದಕ್ಕೆ ಸರಿಯಾದ ನಿಯಮಗಳನ್ನು ಕಾನೂನು ರೂಪದಲ್ಲಿ ಮಾಡಿಕೊಂಡು ಭದ್ರಮಾಡಿ, ಎಲ್ಲಿ ಆಡಳಿತ ಲೋಪದೋಷವಿದೆ ಅಲ್ಲಿ ಸರಿ ಮಾಡತಕ್ಕಂಥ ಒಂದು ಬಿಗಿಯಾದ ಕ್ರಮ

ವನ್ನು ಸರ್ಕಾರದವರು ತಾಳಬೇಕು, ಇದು ಹೈಟೈಂ– ಎಂದು ಸರ್ಕಾರವನ್ನು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಭೂಸುಧಾರಣೆ ಕಾಯಿದೆ ಪ್ರಕಾರ ಅನೇಕ ದೇವಸ್ಥಾನಗಳಿಗೆ ಭೂಮಿ ಇತ್ತು, ಆ ಭೂಮಿಯೆಲ್ಲವನ್ನೂ ಕೂಡ ಅದರ ಬಗ್ಗೆ ಅನೇಕ ಜನ ವಾದ ಮಾಡಲಿಲ್ಲ, ನಾವು ವಾಲೆಂಟರಿಯಾಗಿ ಕೊಟ್ಟಹಾಗೆ ಆಯಿತು. ಅವರವರು ಅವರವರೇ ತೆಗೆದುಕೊಂಡಿದ್ದಾರೆ, ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಉಳುತ್ತಾ ಇದ್ದಾರೆ. ಇದರಿಂದ ಏನಾಗಿದೆಯೆಂದರೆ, ದೇವಸ್ಥಾನಗಳಲ್ಲಿ ನಿತ್ಯಕರ್ಮಗಳು ಏನು ನಡೆಯುತ್ತಿತ್ತು ಆ ದಿನನಿತ್ಯದ ಖರ್ಚುಗಳಿಗೆ ಏನು ಸರ್ಕಾರದಿಂದ ಕೊಡಬೇಕೋ ಅದು ಇನ್ನೂ ನಿಗದಿಯಾಗಿ ಇತ್ಯರ್ಥವಾಗಿಲ್ಲ. ಭೂಮಿ ಇದ್ದಾಗ ಅಲ್ಪಸ್ವಲ್ಪ ಬೆಳೆದರೂ ೧೦ ಕ್ವಿಂಟಾಲ್ ಬೆಳೆದರೆ ೫ ಕ್ವಿಂಟಾಲ್ ಎಂದು ಹೇಳಿ ಎರಡೂವರೆ ಕ್ವಿಂಟಾಲ್ ಆದರೂ ದೇವಸ್ಥಾನಕ್ಕೆ ತಂದುಕೊಡುತ್ತಿದ್ದರು. ಆವನು ಸ್ವಯಂಪ್ರೇರಣೆಯಿಂದ ಏನು ಕೊಡುತ್ತಿದ್ದನ್ನೂ ಅದೂ ಕೂಡ ನಿಂತು ಹೋಗಿದೆ. ಈ ದೇವಸ್ಥಾನಕ್ಕೆ ಸೊಪೊತ್ತೋ ಆ ಜಮೀನುಗಳೆಲ್ಲಾ ಹೋದುವು. ಆ ದೇವಸ್ಥಾನಗಳ ದಿನಚರಿಯ ನಡವಳಿಕೆಗೆ ಸರ್ಕಾರದವರು ಏನು ಅನ್ಯಾಯಿಟಿ ಕೊಡಬೇಕೋ ಅದನ್ನು ಇತ್ಯರ್ಥಮಾಡಿ, ದೇವಸ್ಥಾನಗಳಿಗೆ ಇದ್ದ ಜಮೀನು ಎಷ್ಟು ಹೋಯಿತೋ ಅಷ್ಟನ್ನು ಪರಿಹಾರವಾಗಿ ಕೊಡಬೇಕು, ಕೊಟ್ಟು ದೇವರುಗಳ ಕಾರ್ಯಕ್ರಮವನ್ನು ನಡೆಸಬೇಕು, ಈ ಬಗ್ಗೆ ಸರ್ಕಾರ ಆತಿಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳಬೇಕು. ಇಲ್ಲದೇಹೋದರೆ ಪೂಜಾರಿಗಳು ಈಗ ಸರಾಗವಾಗಿ ಜಮೀನುಗಳು ಕೊಡಿಸಿಬಿಟ್ಟು ದೇವರ ಸಂಬಂಧವಿಲ್ಲದ ಹಾಗೆ ಮಾಡಿಕೊಂಡುಬಿಟ್ಟಿದ್ದಾರೆ. ಆಗ ಜಮೀನು ನನ್ನದು ಆದಮೇಲೆ ಜಮೀನು ಸಲುವಾಗಿ ದೇವರು ನನ್ನದು ಎಂದು ಪೂಜಾರಿಗಳು ಹೇಳುತ್ತಿದ್ದರು. ಇವತ್ತು ಜಮೀನು ನಂದಿ ಆದಮೇಲೆ ದೇವರು ನನಗೆ ಸಂಬಂಧವಿಲ್ಲ ಎನ್ನುವ ಒಂದು ತೀರ್ಮಾನಕ್ಕೆ ಬಂದು, ಹಳ್ಳಿಗಳಲ್ಲಿರತಕ್ಕ ಸಣ್ಣ ಸಣ್ಣ ದೇವಸ್ಥಾನಗಳ ಬಾಗಿಲು ಕೂಡ ತೆಗೆಯುಂವುದಿಲ್ಲ. ಅದಕ್ಕೆ ರಿಪೇರಿ ಇಲ್ಲ, ಸುಣ್ಣ ಇಲ್ಲ, ವರ್ಷಕ್ಕೊಂದು ಸಾರಿ ಜಾತ್ರೆ, ಉತ್ಸವ ಏನು ನಡೆಯುತ್ತಿತ್ತು ಅದೆಲ್ಲಾ ನಿಂತು ಹೋಗುವುದಕ್ಕೆ ಬಂದಿದೆ. ಇವತ್ತಿನ ದಿವಸ ಹಳ್ಳಿಗಳಲ್ಲಿರತಕ್ಕ ದೇವಸ್ಥಾನಗಳ ಪರಿಸ್ಥಿತಿ ಹೀಗೆ ಇದೆ. ಆದುದರಿಂದ ಭೂಮಿಯನ್ನು ಕಳೆದುಕೊಂಡಂಥ ದೇವಸ್ಥಾನಗಳು ಎಲ್ಲೆಲ್ಲಿವೆ, ಹಳ್ಳಿಗಳಲ್ಲಿರಲ್ಲಿ, ಪಟ್ಟಣಗಳಲ್ಲಿರಲ್ಲಿ, ಆ ದೇವಸ್ಥಾನಗಳಿಗೆ ಪರಿಹಾರ ಕೊಡುವ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದಂಥ ನಿಲುವನ್ನು ತೆಗೆದುಕೊಂಡು ಸಹಾಯ ಮಾಡಬೇಕು. ಇನ್ನು ಕೆಲವು ದೇವಸ್ಥಾನಗಳಲ್ಲಿ ವಿಶೇಷವಾಗಿ ಅನೇಕ ವರ್ಷಗಳಿಂದಲೂ ಕೂಡ ಜನ ಅರಿಕೆ ರೂಪದಲ್ಲಿ ಮತ್ತೆ ಇನ್ನಾವುದೋ ರೂಪದಲ್ಲಿ ಚಿನ್ನ, ಬೆಳ್ಳಿ, ಮುಂತಾದ ಬೆಲೆ ಬಾಳತಕ್ಕ ವಸ್ತುಗಳನ್ನು ಇಟ್ಟಿದ್ದಾರೆ. ಇವತ್ತು ಅದನ್ನೆಲ್ಲಾ ಕಾಯ್ತತಕ್ಕುದ್ದು ದೊಡ್ಡ ಜವಾಬ್ದಾರಿ. ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದಲ್ಲಿ, ಚಾಮುಂಡೇಶ್ವರಿ ದೇವಸ್ಥಾನದಲ್ಲಿ. ಮಹದೇಶ್ವರ ದೇವಸ್ಥಾನದಲ್ಲಿ ಕೋಟಿಗಟ್ಟಲೆ ಚಿನ್ನ ಇದೆ. ಟಿಪ್ಪುಸುಲ್ತಾನನ ಕಾಲದಿಂದಲೂ ಆಲ್ಲಿ ಇಟ್ಟಿದ್ದಾರೆ. ಅಲ್ಲಿರತಕ್ಕ ಪಟ್ಟಿ ಹಾರ ಇವತ್ತು ಕೋಟಿಗಟ್ಟಲೆ ಬೆಲೆ ಬಾಳುತ್ತದೆ. ಇದನ್ನು ಏಕೆ ಹೊಡೆದುಕೊಳ್ಳಬಾರದು ಎನ್ನತಕ್ಕವರೂ ಸಮಾಜದಲ್ಲಿ ಉಂಟು. ಅದನ್ನು ಭದ್ರವಾಗಿ ಇಟ್ಟುಕೊಳ್ಳತಕ್ಕಂಥ ಜವಬ್ದಾರಿ ಸರ್ಕಾರಕ್ಕೆ ಇದೆ. ಎರಡನೆಯದು, ಆಗಿನ ಕಾಲದಲ್ಲಿ ಅಂದರೆ ಸಾವಿರಾರು ವರ್ಷಗಳ ಹಿಂದೆ ಕೊಟ್ಟಿರತಕ್ಕ ಚಿನ್ನವನ್ನು ಈಗಿನ ಜನ ನೋಡೇ ಇಲ್ಲ. ಅಂಥಾ ಚಿನ್ನದಲ್ಲಿ ಒಡವೆಗಳನ್ನು ಮಾಡಿಸಿ ಜನ ಹಾಕಿಕೊಳ್ಳುತ್ತಿದ್ದುದ್ದನ್ನು ಪ್ರೀತಿಯಿಂದ ದೇವರಿಗೆ ಕೊಟ್ಟಿದ್ದಾರೆ. ಇವತ್ತಿನದಿವಸ ದೇವರಿಗೆ ಅದನ್ನು ಉಪಯೋಗಿಸುತ್ತಾ ಇಲ್ಲ. ಅದೆಲ್ಲವೂ ಐಡ್ಲಾಗಿ. ಅನುಪಯುಕ್ತವಾಗಿರುವುದನ್ನು ದೇವಸ್ಥಾನದಲ್ಲಿ ಕಾಯುವುದೇ ಒಂದು ದೊಡ್ಡ ಜವಾಬ್ದಾರಿಯಾಗಿದೆ, ಮುಂದೆ ಯಾವುದೋ ಒಂದು ಕಾಲದಲ್ಲಿ, ಏನೋ ಒಂದು ಬದಲಾವಣೆಯಾದಾಗ ಆ ಚಿನ್ನವನ್ನು ಏಕೆ ದೇವಸ್ಥಾನದಲ್ಲಿಡಬೇಕು, ನಾವು ಏಕೆ ತೆಗೆದುಕೊಳ್ಳಬಾರದು ಎಂದು ಸರ್ಕಾರವೇ ಅಥವಾ ಮುಂದೆ ಯಾವುದೇ ಸಮಾಜ ಬದಲಾವಣೆಯಾದಾಗ ಪರಿವರ್ತನೆಯಾಗಬಹುದು. ಆದುದರಿಂದ ಇಂಥಾ ಒಂದು ಅನುಪಯುಕ್ತವಾದ ಚಿನ್ನವನ್ನು ಪಬ್ಲಿಕ್ ಆಕ್ಷನ್‌ಹಾಕಿ ಆ ದೇವಸ್ಥಾನಕ್ಕೆ ಸಂಬಂಧಪಟ್ಟ ಅಭಿವೃದ್ಧಿಕಾರ್ಯಗಳಿಗೆ ಉಪಯೋಗಿಸುವುದಕ್ಕೆ ಸರ್ಕಾರದವರು ಏಕೆ ಮನಸ್ಸು ಮಾಡಬಾರದು ಎಂದು ಹೇಳುತ್ತಿದ್ದೇನೆ. ಒಂದು ದೊಡ್ಡ ಛತ್ರ, ಕಲ್ಯಾಣ ಮಂಟಪ ಮತ್ತು ದೇವಸ್ಥಾನ ಜೀರ್ಣೋದ್ಧಾರ ಮಾಡಲಿಕ್ಕೆ ನಾವು ಹೊರಟಿದ್ದೇವೆ. ಅದಕ್ಕೆ ಲಕ್ಷಾಂತರ ರೂಪಾಯಿಗಳು ಬೇಕಾಗಿದೆ. ದೇವಸ್ಥಾನದಲ್ಲಿರತಕ್ಕ ಚಿನ್ನವನ್ನು ಯಾವ ಕಾಲದಲ್ಲೂ ಉಪಯೋಗಿಸುವುದಿಲ್ಲ, ಇವತ್ತು ಅದನ್ನು ಉಪಯೋಗಿಸುವಂಥ ಕ್ರಮವೂ ಇಲ್ಲ, ಆ ಪದ್ಧತಿಯನ್ನು ಮರೆತು ಬಿಟ್ಟಿದ್ದಾರೆ. ಆದ್ದರಿಂದ ಅದೇ ಚಿನ್ನವನ್ನು ಪಡೆದು, ದೇವಸ್ಥಾನದಲ್ಲಿ ಆಗತಕ್ಕ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಉಪಯೋಗಿಸಿದರೆ ನಿಜವಾಗಲೂ ಕೂಡ ಒಳ್ಳೆಯ ಕೆಲಸ

ಮಾಡಿದಹಾಗೆ ಆಗುತ್ತದೆ ; ಜನಗಳಿಗೂ ಕೂಡ ಸೌಕರ್ಯ ಆಗುತ್ತದೆ, ಮತ್ತೆ ದೇವಸ್ಥಾನದಲ್ಲಿ ಅಭಿವೃದ್ಧಿ ಕೆಲಸ ಕೂಡ ನಡೆಯುತ್ತದೆ. ತನ್ಮೂಲಕ ದೇವಸ್ಥಾನಗಳ ಸೇವೆಗೆ ಯಾರು ಭಕ್ತಾದಿಗಳು ಬರುತ್ತಾರೋ ಆ ಜನರ ಸೌಕರ್ಯವನ್ನು ನಾವು ಹೆಚ್ಚು ಹೆಚ್ಚು ಮಾಡುವುದರಿಂದ, ದೇವಸ್ಥಾನಗಳಿಗೆ ಜನ ಹೆಚ್ಚು ಹೆಚ್ಚಾಗಿ ಬಂದು ದೇವರ ಸೇವೆ ಮಾಡಿಕೊಂಡು ಅವರೂ ಕೂಡ ಸಂತೋಷದಿಂದ ವಾಪಸ್ ಹೋಗುತ್ತಾರೆ. ಈ ಎಲ್ಲಾ ದೃಷ್ಟಿಯಿಂದಲೂ ಕೂಡ ಆಡಳಿತ ಕ್ರಮದಲ್ಲಿ ಬರೀ ಧರ್ಮದರ್ಶಿಗಳ ಕಮಿಟಿಗಳನ್ನು ಮಾಡಿ ಮಾಮೂಲಿಯಂತೆ ಪೂಜೆ ಮಾಡಿಕೊಂಡು ಹೋಗಿ ಅಂದರೆ ಸಾಧ್ಯವಿಲ್ಲ. ಆ ಕಮಿಟಿಯವರು ಸರ್ವ ಸಮಸ್ತವಾದಂಥ ಅಭಿವೃದ್ಧಿ ಕೆಲಸಕಾರ್ಯಗಳನ್ನೂ ಕೂಡ ನಡೆಸಬೇಕಾಗುತ್ತದೆ. ಮತ್ತೆ ಪೂಜೆಗಳು, ಕ್ರಲೆಯನ್ನು ಬೆಳೆಸತಕ್ಕಂಥಾದ್ದು, ಸಂಸ್ಕೃತದಲ್ಲಿ ಮಂತ್ರಗಳನ್ನು ಕಲಿಸ ತಕ್ಕಂಥಃದ್ದು, ಕನ್ನಡದಲ್ಲಿ ಹೇಳತಕ್ಕಂಥಾದ್ದು — ಹೀಗೆ ನಾನಾ ಮುಖವಾದಂಥ ಪ್ರಗತಿಯನ್ನು ಸಾಧಿಸ ಲಿಕೆ ಸರ್ಕಾರ ಒಂದು ವಿಸ್ತಾರವಾದಂಥ ಮಂಡಲಿಯನ್ನು ರಚಿಸುವುದಕ್ಕೆ ಆಲೋಚನೆ ಮಾಡಬೇಕು ; ಅದನ್ನು ಮಾಡಿ, ದೇವಸ್ಥಾನಗಳ ಆಸ್ತಿವಾಸ್ತಿಗಳನ್ನು ಉಳಿಸಬೇಕು, ಸಂಸ್ಕೃತಿಯನ್ನು ಉಳಿಸಬೇಕು, ಮತ್ತೆ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಗಳನ್ನು ಮಾಡಿಕೊಂಡು, ಅಲ್ಲಿ ಭಕ್ತಾದಿಗಳು ಕಾಣಿಕೆ ಮುಂತಾದುವನ್ನು ಕೊಡುತ್ತಾರಲ್ಲ. ಈ ರೀತಿ ದೇವಸ್ಥಾನಕ್ಕೆ ಬರತಕ್ಕಂಥ ವರಮಾನವೆಲ್ಲವೂ ಕೂಡ ಸೋರಿಹೋಗದಂತೆ ಸರಿಯಾದ ಲೆಕ್ಕಪತ್ರಗಳನ್ನು ಇಟ್ಟು, ದೇವಸ್ಥಾನದ ಸಮಸ್ತ ಕಾರ್ಯವನ್ನೂ ನಡೆಸಿ ಕೊಂಡು ಹೋಗುವಂತೆ ಮಾಡಬೇಕು ; ಈ ಒಂದು ಕೀರ್ತಿ ನಮ್ಮ ಯುವಕ ಮಂತ್ರಿ ಶ್ರೀಮಾನ್ ಕಸಬೆ ಯವರಿಗೆ ದೊರೆಯಬೇಕು, ಅವರ ಕಾಲದಲ್ಲಿ ಇಂಥಾ ಕೆಲಸಕಾರ್ಯಗಳು ನಡೆಯಬೇಕು ಎಂದು ಹೇಳಿ, ನನಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್.ಎಲ್. ತಿಮ್ಮೇಗೌಡ (ಬಸವನಗುಡಿ).—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಡಿ.ಟಿ. ಮಾಯಣ್ಣನವರು ಮಂಡಿಸಿರತಕ್ಕಂಥ ನಿರ್ಣಯಕ್ಕೆ ನಾನು ಹೃತ್ಪೂರ್ವಕವಾದ ಬೆಂಬಲವನ್ನು ಸೂಚನೆ ಮಾಡಿ ಎರಡು ಮಾತಂಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ಗಂಗಾಧರನ್‌ರವರು ಯಾವರೀತಿ ದೇವಸ್ಥಾನಗಳನ್ನು ಬೆಳೆಸಬೇಕು, ದೇವಸ್ಥಾನಕ್ಕೆ ಸಂಬಂಧಪಟ್ಟ ಕಲೆಗಳೂ ಕೂಡ ಬೆಳೆಯು ವುದಕ್ಕೆ ಯಾವ ರೀತಿ ಪ್ರೋತ್ಸಾಹ ಕೊಡಬೇಕು ಎನ್ನುವುದನ್ನು ಸವಿಸ್ತಾರವಾಗಿ ಹೇಳಿದ್ದಾರೆ. ಅದನ್ನು ಸಂಪೂರ್ಣವಾಗಿ ನಾನೂ ಕೂಡ ಬೆಂಬಲಿಸುತ್ತೇನೆ. ಅವರೂ ಕೂಡ ಈ ಬಗ್ಗೆ ಸದನದ ಸಮಿತಿಯನ್ನು ಮಾಡಿ ಕರ್ನಾಟಕದಲ್ಲಿರತಕ್ಕ ದೇವಸ್ಥಾನಗಳನ್ನು ಸಮೀಕ್ಷೆ ಮಾಡಿ, ರಿಪೋರ್ಟ್ ಕೊಟ್ಟು ದೇವಸ್ಥಾನಗಳು ಅಭಿವೃದ್ಧಿಯಾಗುವಂಥ ಕೆಲಸಗಳನ್ನು ಮಾಡಬೇಕು ಎಂದು ಹೇಳಿದ್ದಾರೆ. ಅದಕ್ಕೂ ಕೂಡ ನಾನು ಬೆಂಬಲ ಕೊಡುತ್ತೇನೆ. ಮುಜರಾಯಿ ಇಲಾಖೆಯಲ್ಲಿ ದೇವಸ್ಥಾನಗಳಿಗೆ ಧರ್ಮದರ್ಶಿಗಳನ್ನು ನೇಮಕ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿರತಕ್ಕುದು ಕೆಲವು ಮುಜರಾಯಿ ದೇವಸ್ಥಾನಗಳು, ಮಿಕ್ಕಿದ್ದು ಖಾಸಗಿ ದೇವಸ್ಥಾನಗಳು. ಇವತ್ತಿನದಿವಸ ಮುಜರಾಯಿ ದೇವಸ್ಥಾನಗಳಲ್ಲಿ ಧರ್ಮದರ್ಶಿಗಳಿಲ್ಲರೂ ಕೂಡ ಸರಿಯಾಗಿ ಕೆಲಸಮಾಡುತ್ತಾ ಇಲ್ಲವೆಂದು ಮಾನ್ಯ ಶಿವಯ್ಯನವರು ಹೇಳಿದ್ದಾರೆ, ನಾನೂ ಕೂಡ ಹೇಳುತ್ತೇನೆ. ಮಾನ್ಯ ಮಂತ್ರಿಗಳಿಗೆ ತಮ್ಮ ಮುಖಾಂತರ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಹನುಮಂತನಗರದಲ್ಲಿ ಸುಬ್ರಹ್ಮಣ್ಯಸ್ವಾಮಿ ಮತ್ತು ಕುಮಾರಸ್ವಾಮಿ ದೇವಸ್ಥಾನ ಇದೆ. ಆದರೆ ಕೆಂಪೇಗೌಡರು ಕಟ್ಟಿದಂಥ ದೇವಸ್ಥಾನ. ೪ ದಿಕ್ಕುಗಳಲ್ಲಿ ಯಾವರೀತಿ ಕೆಂಪೇಗೌಡರು ಟವರ್ಸ್‌ನ್ನು ಕಟ್ಟಿದ್ದಾರೆ. ಅದೇ ರೀತಿ ಒಂದು ಲಿಂಗವನ್ನು ಸ್ಥಾಪನೆ ಮಾಡಿದರು, ಆಗ ಅದು ಬೌಂಡರಿಯಾಗಿತ್ತು. ಈಗ ಹನುಮಂತನಗರ ಬೆಳೆದಿದೆ, ಅದು ಮಧ್ಯೆ ಸೇರಿಕೊಂಡಿದೆ. ಅಲ್ಲಿ ಒಂದು ಗುಡ್ಡ ಬೆಳೆದಿದೆ. ಇದು ಹೇಗೆ ಆಯಿತು ಅಂದರೆ, ೧೯೦೧ರಲ್ಲಿ ನರಹರಿರಾಯರು ಜಡ್ಜ್ ಆಗಿದ್ದರು, ಅವರು ಜಡ್ಜ್ ಆಗಿದ್ದಾಗ ಯಾರಿಗೋ ಮರಣದಂಡನೆ ವಿಧಿಸಿದಂಥ ಕಾಲದಲ್ಲಿ ಅವರ ಮನಸ್ಸಿಗೆ ನೋವು ಆದಾಗ ೧೯೦೧ನೇ ಇಸವಿ ಯಲ್ಲಿ ಅಲ್ಲಿ ಒಂದು ಲಿಂಗವನ್ನು ಸ್ಥಾಪನೆಮಾಡಿ, ದೇವಸ್ಥಾನವನ್ನು ಕಟ್ಟುವುದಕ್ಕೆ ಶುರು ಮಾಡಿದರು, ೧೯೨೪ರಲ್ಲಿ ಮಹಾರಾಜರು ಆ ದೇವಸ್ಥಾನಕ್ಕೆ ೧೭ಳ ಎಕರೆ ಜಮೀನನ್ನು ಕೊಟ್ಟರು. ಈ ಕುಮಾರ ಸ್ವಾಮಿ ಲೇಔಟ್ ಎಂದು ಬಿ.ಡಿ.ಎ ನವರು ಮಾಡಿ ಅಲ್ಲಿ ಮನೆಗಳನ್ನೂ ಕೂಡ ಕಟ್ಟಿಸಿಕೊಡುತ್ತಿದ್ದಾರೆ. ಸುಮಾರು ೧೨೬ ಎಕರೆ ಜಮೀನನ್ನು ಹಿಂದಿನ ಮಹಾರಾಜರಾಗಿದ್ದ ಶ್ರೀಮಾನ್ ಕೃಷ್ಣರಾಜ ಒಡೆಯರ್ ರವರು ಈ ದೇವಸ್ಥಾನಕ್ಕೋಸ್ಕರ ೧೯೨೪ನೇ ಇಸವಿಯಲ್ಲೇ ಕೊಟ್ಟಿದ್ದರು. ಆದಾದನಂತರ ನಮ್ಮ ಸರ್ಕಾರದವರು ೧೯೫೯ನೇ ಇಸವಿಯಲ್ಲಿ ಆ ದೇವಸ್ಥಾನಕ್ಕೆ ಧರ್ಮದರ್ಶಿಗಳ ಒಂದು ಕಮಿಟಿಯನ್ನು

ಮಾಡಿ ಆದರ ಮೂಲಕ ಆಡಳಿತವನ್ನು ನಡೆಸುತ್ತಿದ್ದರು. ಕೆಂಪೇಗೌಡನ ಕಾಲದಿಂದ ಆರಂಭವಾದ ಈ ದೇವಸ್ಥಾನದ ಧರ್ಮದರ್ಶಿಗಳಲ್ಲಿ ಕೆಲವರು ತಮಿಳರು ಸೇರಿಕೊಂಡು ಕಳೆದ ತಿಂಗಳು ಆ ದೇವಸ್ಥಾನದ ರಾಜಗೋಪುರಕ್ಕೆ ಅಸ್ತಿಭಾರ ಹಾಕಿದಂಥ ಸಂದರ್ಭದಲ್ಲಿ ''ಕುಮಾರಸ್ವಾಮಿ ಗುಡ್ಡ'' ಎಂಬುದಕ್ಕೆ ಬದಲಾಗಿ ''ಪೊನ್ನು ಮಲೈ'' ಎಂದು ನಾಮಕರಣ ಮಾಡಿದ್ದಾರೆ. ಪೊನ್ನು ಮಲೈ ಅಂದರೆ ''ಚಿನ್ನದ ಗುಡ್ಡ'' ಎಂದು. ''ಪೊನ್ನು ಮಲೈ'' ಎಂದು ತಮಿಳಿನಲ್ಲಿ ಬೋರ್ಡ್ ಹಾಕಿದ್ದಾರೆ. ಕಲ್ಲಿನ ಮೇಲೂ ಕೂಡ ಪೊನ್ನು ಮಲೈ ಎಂದು ಹಾಕಿಸಿ ಮಾನ್ಯ ಮುಖ್ಯ ಮಂತ್ರಿಗಳಾದ ಗುಂಡೂರಾಯರು ಈ ದಿವಸ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು, ತಿರುಚೂರು ಸ್ವಾಮಿಗಳು ಅಸ್ತಿಭಾರ ಹಾಕಿದರು ಎಂದು ಬರೆಸಿದ್ದಾರೆ.

ಸ್ವಾಮಿ, ನಮ್ಮ ಬೆಂಗಳೂರು ಹನುಮಂತ ನಗರದಲ್ಲಿ ತಮಿಳರ ಹೆಸರು ದೇವಸ್ಥಾನಕ್ಕೆ ಬರುವುದು ಸರಿಯೇ ? ಆ ಕ್ಷೇತ್ರದಲ್ಲಿ ತಮಿಳು ಮಾತನಾಡುವವರೇ ಇಲ್ಲ. ಅಂಥಾದ್ದರಲ್ಲಿ ಈ ಹೆಸರು ಅಲ್ಲಿ ಹೇಗೆ ಬಂತು ? ಇದು ಅಲ್ಲಿನ ನಾಗರೀಕರಿಗೆ ಬಹಳ ಖೇದವನ್ನು ತಂದಿದೆ. ಈಗಾಗಲೇ ಗೋಕಾಕ್ ವರದಿಯ ಬಗ್ಗೆ ಬೆಂಗಳೂರು ನಗರದಲ್ಲಿ ಎಂಥೆಂಥ ಚಳುವಳಿಗಳು ನಡೆದುವು ಎಂಬುದನ್ನು ಸರ್ಕಾರದವರು ತಿಳಿದು ಕೊಂಡು ಮೊದಲು ಈ ವಿಚಾರವನ್ನು ತೀರ್ಮಾನ ಮಾಡಬೇಕು. ನಮ್ಮ ಮುಜರಾಯಿ ಇಲಾಖೆಯವರು ಆದಷ್ಟು ಶೀಘ್ರವಾಗಿ ಇದನ್ನು ಬದಲಾವಣೆ ಮಾಡದೇ ಹೋದರೆ ಮತ್ತೊಂದು ಗಂಭೀರವಾದ ಸಮಸ್ಯೆ ಉದ್ಭವವಾಗಿ, ಗೊಂದಲಮಯ ವಾತಾವರಣ ಉಂಟಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದೆ ಎನ್ನುವ ಮಾತನ್ನು ಪುನ್ನಿಚ್ಚರಿಕೆಯಾಗಿ ನಾನು ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಈಗಾಗಲೇ ಪತ್ರಿಕೆಯಲ್ಲಿ ''ಸಹನೆಗೆ ಸವಾಲ್'' ಎಂದು ಬಂದಿದೆ.

> ''ಕುಮಾರಸ್ವಾಮಿ ದೇವಸ್ಥಾನದಲ್ಲಿ ಕೆಲವು ಭಕ್ತಾದಿಗಳು ಪೊನ್ನುಮಲೈ ಎಂಬ ನಾಮ ಫಲಕ ಹಾಕಿರುವುದು ಕನ್ನಡಿಗರ ಸಹನೆಗೆ ನಿಜವಾದ ಸವಾಲು ಹಾಕಿದೆ, ಬೆಂಗಳೂರಿನಲ್ಲಿ ತಮಿಳಿನ ಹೆಸರುಗಳನ್ನು ರಸ್ತೆ ಹಾಗೂ ದೇವಸ್ಥಾನಗಳಿಗೆ ಇಟ್ಟಿರುವುದು ನಿಜಕ್ಕೂ ನಾಚಿಕೆಗೇಡು.''

ಸ್ವಾಮಿ, ನಮ್ಮ ಬೆಂಗಳೂರಿನಲ್ಲಿ ಸದಾಶಿವನಗರದ ಕೆಳಭಾಗದಲ್ಲಿ ವೈಯಾಲಿಕಾವಲ್ ಎಂದು ಇದೆ. ಮೊದಲು ಇದಕ್ಕೆ ಬೇರೆ ಹೆಸರು ಇತ್ತು. ಅನಂತರ ಆ ಹೆಸರನ್ನು ತೆಗೆದು ವೈಯಾಲಿಕಾವಲ್ ಎಂದು ತಮಿಳು ಹೆಸರನ್ನು ಇಟ್ಟರು. ಅದೇ ರೀತಿಯಲ್ಲಿ ಇವತ್ತು ಈ ಕುಮಾರಸ್ವಾಮಿ ದೇವಸ್ಥಾನಕ್ಕೆ ಹೋಗುವುದಕ್ಕೆ ೫೦ ಅಡಿ ಅಗಲದ ಒಂದು ರಸ್ತೆ ಇದೆ. ಅದಕ್ಕೆ ಪೊನ್ನುಮಲೈ ರಸ್ತೆ ಎಂಬುದಾಗಿಯೂ, ಈಗಿರ ತಕ್ಕ ಶ್ರೀನಗರ ಬಸ್ ಸ್ಟ್ಯಾಂಡಗೂ ''ಪೊನ್ನುಮಲೈ ಬಸ್ ಸ್ಟ್ಯಾಂಡ್'' ಎಂಬುದಾಗಿಯೂ ಹೆಸರಿಡುವುದಾಗಿ ಸೂಚಿಸಿ ಮಾನ್ಯ ಮುಖ್ಯಮಂತ್ರಿಯವರಿಗೆ ಅವರು ಒಂದು ಮನವಿಯನ್ನು ಕೊಟ್ಟು ಕೇಳಿಕೊಂಡಿದ್ದಾರೆ. ಕನ್ನಡಿಗರಾದ ನಾವು ಬಹಳ ಸಹನಶೀಲರು. ಆದರೆ ಅದಕ್ಕೂ ಒಂದು ಮಿತಿ ಇದೆ. ನಾವು ಉದಾರಿಗಳು, ಇಲ್ಲಿಗೆ ಹೊರ ರಾಜ್ಯದಿಂದ ಯಾರು ಬಂದು ನೆಲೆಸಿದರೂ ಸುಮ್ಮನಿರುತ್ತೇವೆ, ಸುಮಾರು ೫೦ ಕೊಳಚೆ ಪ್ರದೇಶಗಳ ಪೈಕಿ ೪೯ ಕೊಳಚೆ ಪ್ರದೇಶಗಳಲ್ಲಿ ಹೊರರಾಜ್ಯದವರು ಇದ್ದರೂ ಕೂಡ ಸಹನೆಯಿಂದ ಬಿಟ್ಟುಕೊಂಡು ಸುಮ್ಮನೆ ಕುಳಿತ್ತಿದ್ದೇವೆ. ಅವರನ್ನು ಇಲ್ಲಿಂದ ಓಡಿಸಿ ಎಂದು ಸರ್ಕಾರದವರಿಗೆ ನಾವು ಹೇಳುತ್ತಿಲ್ಲ. ಅವರನ್ನು ಬೇರೆಡೆ ಹಾಕಿ ಸ್ಲಂನ್ನು ಅಭಿವೃದ್ಧಿ ಮಾಡಿ ಎಂದು ಹೇಳುತ್ತಿದ್ದೇವೆ. ಕುಮಾರಸ್ವಾಮಿ ದೇವಸ್ಥಾನದ ಸುತ್ತ ಸುಮಾರು ೧೫೦-೨೦೦ ಗುಡಿಸಲುಗಳಿವೆ. ಅವುಗಳನ್ನೂ ಕೂಡ ತೆಗೆಯುವ ವ್ಯವಸ್ಥೆ ಮಾಡಿಲ್ಲ.

ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನಮ್ಮ ಮುಜರಾಯಿ ಇಲಾಖೆಯವರಿಗೆ ನಾನು ತಿಳಿಯಬಯಸುವುದೇನೆಂದರೆ, ಈಗ ಕುಮಾರಸ್ವಾಮಿ ದೇವಸ್ಥಾನಕ್ಕೆ ಪೊನ್ನುಮಲೈ ಎಂದು ತಮಿಳಿನಲ್ಲಿ ಹಾಕಿರುವ ಬೋರ್ಡನ್ನೂ ಮತ್ತು ರಾಜಗೋಪುರದ ಅಡಿಗಲ್ಲಿಗೆ ಹಾಕಿರತಕ್ಕ ಕಲ್ಲನ್ನೂ ತಕ್ಷಣ ತೆಗೆಸಲು ಕ್ರಮ ಕೈಕೊಳ್ಳದಿದ್ದರೆ ಮುಂದೆ ಪರಿಸ್ಥಿತಿ ಬಹಳ ಕಷ್ಟಕ್ಕೆ ಬರುತ್ತದೆ. ಈಗಾಗಲೇ ೪-೫ ಜನರು ''ಸಹನೆಗೆ ಸವಾಲ್'' ಎಂದು ಪತ್ರಿಕೆಯಲ್ಲಿ ಬರೆದಿದ್ದಾರೆ. ಆದುದರಿಂದ, ಮುಂದೆ ಈ ಸಹನೆಗೆ ಮಿಗಿರುವ ಕೆಲಸಕ್ಕೆ ಅವಕಾಶವನ್ನು ಮಾನ್ಯ ಮಂತ್ರಿಯವರು ಕೊಡಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಷ್ಟೇ ಅಲ್ಲದೆ ನಮ್ಮ ಬೆಂಗಳೂರು ನಗರಸಭೆಯವರಿಗೆ ಮಾನ್ಯ ಮುಜರಾಯಿ ಖಾತೆ ಸಚಿವರು ಆದೇಶ ನೀಡಿ ಈ ಮೊದಲು ಹೇಳಿದ ತಮಿಳು ಹೆಸರುಗಳನ್ನು ಆ ದೇವಸ್ಥಾನಕ್ಕಾಗಲಿ, ಅಥವಾ ಅದಕ್ಕೆ ಹೋಗತಕ್ಕ ರಸ್ತೆ

ಗಾಗಲಿ ಅಥವಾ ಶ್ರೀನಗರ ಬಸ್ ಸ್ಟ್ಯಾಂಡ್‌ಗಾಗಲಿ ಇಡಕೂಡದೆಂದು ತಿಳಿಸಬೇಕು. ಇದರ ಜೊತೆಗೆ ಇಂಥ ತಮಿಳು ಹೆಸರುಗಳನ್ನು ಸೂಚಿಸಿದ ಧರ್ಮದರ್ಶಿಗಳು ಯಾರಿದ್ದಾರೆ ಅವರನ್ನೂ ಮೊದಲು ಬದಲಾವಣೆ ಮಾಡಬೇಕು. ಅಲ್ಲದೆ ಇನ್ನು ಮುಂದೆ ಈ ದೇವಸ್ಥಾನಕ್ಕೆ ಧರ್ಮದರ್ಶಿಗಳನ್ನು ನೇಮಕ ಮಾಡುವಾಗ ಆ ಕ್ಷೇತ್ರದಲ್ಲಿರತಕ್ಕ ಜನರನ್ನು ಕೇಳಿ ಮಾಡಬೇಕು. ಒಟ್ಟಿನಲ್ಲಿ ತಮಿಳು ಹೆಸರನ್ನು ಎಲ್ಲೆಲ್ಲಿ ಇಡಬೇಕೆಂದು ಸೂಚಿಸಿದ್ದಾರೆ. ಅದನ್ನೆಲ್ಲಾ ಬಿಟ್ಟು ಈ ದೇವಸ್ಥಾನದ ಅಭಿವೃದ್ಧಿಗಾಗಿ ಮತ್ತು ಇದನ್ನು ಧರ್ಮದ ಕ್ಷೇತ್ರವಾಗಿ ಉಳಿಸಿಕೊಳ್ಳುವುದಕ್ಕೆ ಸಹಕಾರಿಯಾಗುವಂಥ ಧರ್ಮದರ್ಶಿಗಳನ್ನು ನೇಮಕ ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ಸಲಹೆ ನೀಡಿ ಮಾನ್ಯ ಸದಸ್ಯರಾದ ಮಾಯಣ್ಣನವರು ತಂದಿರತಕ್ಕ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಂಡು ಈ ಸಮಿತಿಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ. ಪ್ರಭಾಕರ್** (ನೆಲಮಂಗಲ).— ಮಾನ್ಯ ಅಧ್ಯಕ್ಷರೆ, ನಾನು ಈ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಕೆಲವು ವಿಚಾರಗಳನ್ನು ಸರ್ಕಾರಕ್ಕೆ ತಮ್ಮ ಮುಖಾಂತರ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದು ಈಗಾಗಲೇ ಆಗಬೇಕಾಗಿತ್ತು. ಆದರೆ ಸ್ವಲ್ಪ ನಿಧಾನವಾಗಿಯಾದರೂ ಇದು ಇಲ್ಲಿ ಬಂತಲ್ಲಾ ಎಂದು ಸಂತೋಷಪಡಬೇಕಾಗಿದೆ. ಇದರಲ್ಲಿ ಹಿಂದೂ ದೇವಾಲಯಗಳು ಎಂದು ಸೇರಿಸಿದ್ದೀರಿ. ಇನ್ನೂ ಅನೇಕ ಧರ್ಮದ ಜನರು ತಮ್ಮ ದೇಶದಲ್ಲಿ ಇರುವುದರಿಂದ ಹಿಂದೂ ಜನರಿಗೆ ಸಂಬಂಧಪಟ್ಟ ದೇವಾಲಯಂಗಳು ಮತ್ತು ಅವುಗಳ ಆಸ್ತಿಯನ್ನು ರಕ್ಷಣೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಇದರಲ್ಲಿ ಸೇರಿಸಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಮಸೀದಿಗಳಾಗಲಿ, ಚರ್ಚ್‌ಗಳಾಗಲಿ, ಗುರುಕುಲಗಳಾಗಲಿ, ಸ್ತೂಪಗಳಾಗಲಿ ಇವುಗಳನ್ನು ಯಾವುದೇ ಹೆಸರಿನಿಂದ ಕರೆದರೂ ಅವುಗಳೆಲ್ಲಾ ದೇವಾಲಯಗಳು ಅವುಗಳ ಆಸ್ತಿಪಾಸ್ತಿಗಳು ಚೆನ್ನಾಗಿರಬೇಕೆಂದು ಹೇಳಿದ್ದಾರೆ. ಆದರಲ್ಲೂ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರನ್‌ರವರು ಇದರ ಬಗ್ಗೆ ಎಷ್ಟು ಆಳವಾಗಿ ಹೋಗಬಹುದೋ, ಅದೇರೀತಿ ಎಷ್ಟು ಎತ್ತರಕ್ಕೆ ಹೋಗಬಹುದೋ ಅಷ್ಟಕ್ಕೂ ಹೋಗಿ ಎಲ್ಲ ವಿಚಾರಗಳನ್ನೂ ಬಹಳ ವಿಚಾರವಾಗಿ, ಮನದಟ್ಟಾಗುವಂತೆ ತಿಳಿಸಿದ್ದಾರೆ. ಅಲ್ಲದೆ ಇದರ ಬಗ್ಗೆ ಇನ್ನೂ ಆಳವಾಗಿ ಹೋಗುವುದಕ್ಕೆ ಮೆಟ್ಟಿಲುಗಳನ್ನೂ ಮಾಡಿಕೊಂಡಿದ್ದಾರೆ. ಆದರೆ ಅದನ್ನೆಲ್ಲಾ ಹೇಳುವುದಕ್ಕೆ ಇಲ್ಲಿ ಅವಕಾಶವಿಲ್ಲದೆ ಇಷ್ಟಕ್ಕೆ ನಿಲ್ಲಿಸಬೇಕಾಯಿತಲ್ಲಾ ಎಂದು ಸಂಕಟವನ್ನೂ ಪಟ್ಟಂತೆ ನನಗೆ ಅನಿಸಿತು. ನಾನು ಯಾವುದು ಬೇಕೆಂದು ಹೇಳುತ್ತೇನೆ ಅದನ್ನು ಬೇಡವೆಂದು ಹೇಳುವವರು ಯಾರಾದರೂ ಇದ್ದರೆ ಹೇಳಿ, ಅನಂತರ ನಾನು ಅದನ್ನು ಏತಕ್ಕೆ ಹೇಳಿದೆ ಎಂಬುದನ್ನು ಸಮರ್ಥನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಮ್ಮ ಮಾನ್ಯ ಗೆಳೆಯರು ಮಾತನಾಡುತ್ತಾ ಹೇಳಿದಂತೆ, ನಮ್ಮ ದೇಶದಲ್ಲಿ ಸಂಗೀತ, ನೃತ್ಯ ಶಿಲ್ಪಕಲೆ, ಸಾಹಿತ್ಯ, ಅದರಲ್ಲೂ ಜೀವನ ಸಾಹಿತ್ಯ, ಪ್ರಗತಿ ಸಾಹಿತ್ಯ, ರಸ ಸಾಹಿತ್ಯ, ಇವುಗಳನ್ನು ಬೆಳೆಸುವುದರಲ್ಲಿ ದೇವಾಲಯಂಗಳು ಚೆನ್ನಾಗಿದ್ದರೆ ಅವು ಮನುಷ್ಯನ ಆತ್ಮದ ಉನ್ನತಿಗೆ, ಅವನ ಆತ್ಮಾನಂದಕ್ಕೆ, ಅವನ ಮುಕ್ತಿಗೆ ಸಾಧನವಾದೀತು ಎಂದು ನಮ್ಮ ಹಿರೀಕರು ನಮಗೆ ಕೊಟ್ಟಿರತಕ್ಕ ಆಸ್ತಿ, ಇದನ್ನು ಯಾರೂ ಕಿತ್ತುಕೊಂಡು ಹೋಗುವುದಿಲ್ಲ. ಇದು ಸ್ಥಿರ ಆಸ್ತಿ ಎಂದು ಹೇಳಿದ್ದಾರೆ, ಇದು ಒಂದು ರೀತಿಯಲ್ಲಿ ಮೆಚ್ಚತಕ್ಕ ವಿಚಾರ. ಇದು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಉಳಿದಿರುತ್ತದೆ. ಎಲ್ಲ ಕಡೆಗಳಲ್ಲೂ ನಮ್ಮ ದೇಶ ಹೋರಗಿನವರನ್ನು ಆಕರ್ಷಿಸಿ ಇಲ್ಲಿದ್ದಂಥ ವಜ್ರ ವೈಡೂರ್ಯಗಳನ್ನು ದೋಚಿಕೊಂಡು ಹೋಗುವುದಕ್ಕೆ ಬಂದವರು ಇಲ್ಲಿನ ಜನಜೀವನವನ್ನು ಸೂರೆ ಮಾಡಿ ಭಾರತದಂಥ ಪುಣ್ಯಭೂಮಿ ಈ ಜಗತ್ತಿನಲ್ಲಿ ಇನ್ನೊಂದು ಇಲ್ಲ ಎಂದು ತಿಳಿದುಕೊಂಡು ಹೋಗುವಂತೆ ಮಾಡಿದೆ. ಇಂಥ ನಿದರ್ಶನಗಳು ನಮ್ಮ ಇತಿಹಾಸದಲ್ಲಿ ಸಾಕ್ಷೀಭೂತವಾಗಿದೆ.

೧೨.೩೦ ಪಿ.ಎಂ.

ಇಷ್ಟಾದರೂ ಕೂಡ ನಮ್ಮ ಸಾಹಿತ್ಯ ಕಳೆಗುಂದಿಲ್ಲ ಅದು ತನ್ನ ಜೀವಸತ್ವವನ್ನು ಕಳೆದುಕೊಂಡಿಲ್ಲ' ಕಾರಣಾಂತರಗಳಿಂದ ಅದರ ಪ್ರಭುಲ್ಲತೆಯನ್ನು ಕಳೆದುಕೊಂಡಿದೆ. ಇದು ಸುಂದರವಾಗಿಲ್ಲ ಎನ್ನುವ ದುಃಖ ನಮ್ಮ ಮನಸ್ಸಿಗೆ ಬಂದಾಗ ಚೆನ್ನಾಗಿ ಆಗಬೇಕು ಎನ್ನುವ ಮಾತನ್ನು ಹೇಳುವ ಕಾಲ ಬಂದಿದೆ. ನನ್ನ ಸ್ನೇಹಿತರಾದ ಮಾನ್ಯ ಮಾಯಣ್ಣನವರು ಇದನ್ನು ಏನಾದರೂ ಸ್ವಂತ ಪ್ರೇರಣೆಯಿಂದ ಈ ಒಂದು ಠರಾವನ್ನು ತಂದರೋ, ಅಥವಾ ಅದರ ಅಧೋಗತಿಯನ್ನು ಕಂಡು ನೊಂದ ಜನರನ್ನು ಈ ಕಾಲಕ್ಕಾದರೂ ನೋಡುವುದಕ್ಕಾಗಿ ಇದನ್ನು ಬೆಳಕಿಗೆ ತಂದು

ಆದರಿಂದ ಪ್ರಪುಲ್ಲತರಾಗಿ ತಂದರೋ ಎಂದು ಯೋಚನೆ ಮಾಡುತ್ತಾ ಇದ್ದೇನೆ. ಆದು ಹೇಗಾದರೂ ಬರಲಿ ಆದು ನಮ್ಮ ಮುಂದೆ ಬಂದಿದೆ. ಆದು ನಮ್ಮ ಧರ್ಮ ಮತ್ತು ಕರ್ತವ್ಯವೆಂದು ಹೇಳಿ ನಾನು ಎರಡು ಮಾತುಗಳನ್ನು ಹೇಳಲಿಕ್ಕೆ ಪ್ರಯತ್ನ ಪಡುತ್ತೇನೆ. ಆದರಲ್ಲೂ ಸಹಿತ ತಾವು ಹಾಕಿಕೊಂಡಿರತಕ್ಕಂಥ ಕೃತಿಗೆ ನಮಗೆ ದುಃಖಿತರತಕ್ಕಂಥ ಪಟ್ಟದಲ್ಲಿ ಇದೆ. ಆದರೆ ಬೇರೆಯವರೂ ಕೂಡ ತಮ್ಮ ಜೀವನಕ್ಕೆ ಸಂಬಂಧಪಟ್ಟ ಮೌಲ್ಯಗಳನ್ನು ರೂಢಿಸಿಕೊಂಡು ಎಚ್ಚರಿಕೆಯಿಂದ ಇಟ್ಟು ಕೊಂಡಿರುತ್ತಾರೆ. ಆದರೆ ನಮ್ಮ ಪರಿಸ್ಥಿತಿ ಬಹಳ ಆಧೋಗತಿಗೆ ಬಂದಿದೆ ಎನ್ನತಕ್ಕಂಥದ್ದು ಹೋಲಿಕೆ ರೀತಿಯಲ್ಲಿ ಹೇಳತಕ್ಕಂಥದ್ದನ್ನು ನಾವು ನಿಜವೆಂದು ಒಪ್ಪಿಕೊಂಡರೆ ನಾವು ಏತಕ್ಕೆ ಮನುಷ್ಯರಾಗಿ ಬಾಳುತ್ತಿದ್ದೇವೆ ಎನ್ನುವ ದುಃಖ ಬರುತ್ತದೆ. ನಮ್ಮ ಸಾಹಿತ್ಯದಲ್ಲಿ ಗುಡಿಗೋಪುರಗಳು, ಮಠ ಮಾನ್ಯಗಳು, ಆರ ಮನೆ, ಗುರುಮನೆಗಳುಆಶ್ರಮಗಳು ಇವುಗಳಿಗೇನೂ ಕಡಿಮೆ ಇಲ್ಲ. ಇವೆಲ್ಲವೂ ಜೀವನಕ್ಕೆ ಅಗತ್ಯವಾಗಿರುವುದರಿಂದ ಈ ಭಾಗದಲ್ಲಿ ಏನಾದರೂ ಕುಂಠಿತವಾಗಿ ಮಂಕಾಗಿ ಕಳೆಗುಂದಿ ಈ ಆಧೋಗತಿ ದೇಶಕ್ಕೆ ಬಂದಿದೆ ಎಂದು ನಾವು ತಿಳಿದುಕೊಂಡರೂ ಕೂಡ ಆದು ಒಂದು ರೀತಿಯಲ್ಲಿ ದುರ್ಗತಿಯೇ ಎಂದು ಭಾವಿಸಬೇಕು. ಈಗ ಮಾತನಾಡಿದಂಥ ಗೆಳೆಯರಾದ ಶ್ರೀ ಕೆ. ಬಿ. ಶಿವಯ್ಯನವರು ಹೇಳುತ್ತಾರೆ. ಜನ ದೇವರ ಹೆಸರನ್ನು ಏತಕ್ಕೆ ಹೇಳುತ್ತಾರೋ ನಾಚಿಕೆಯಾಗುವ ರೀತಿಯಲ್ಲಿ ಅವುಗಳ ವಾತಾವರಣ ರೀತಿನೀತಿಗಳಾಗಿದೆ. ಅವುಗಳ ಒಂದು ಬೆಳವಣಿಗೆ ಕೊನೆಗೊಳ್ಳದೆ ಹೆಸರಿಗೆ ದೇವಾಲಯ ಇದೆ. ದೇವಾಲಯದ ಸುತ್ತ ಕಿಪ್ಪೆ ಹಾಕತಕ್ಕಂಥ ಜನರು ಇದ್ದಾರೆ. ದೇವಾಲಯಗಳಲ್ಲಿ ಸೂರೆ ಮಾಡತಕ್ಕಂಥವರು ಕಡಿಮೆ ಇದ್ದಾರೆಯೇ. ದೇವರನ್ನು ಕದ್ದು ಕರಗಿಸಿ ಮಾರಾಟ ಮಾಡುವವರು ಕಡಿಮೆ ಆಗಿದ್ದಾರೆಯೇ. ಅವರೂ ಕೂಡ ದೇವರಿಂದ ಲೈಸೆನ್ಸ್‌ನ್ನು ಪಡೆದುಕೊಂಡಿದ್ದಾರೆಂದು ಹೇಳಬಹುದು. ನಮ್ಮ ಬಾಳಿನಲ್ಲಿ ಬಂಗಾರ, ವಜ್ರ ವೈಡೂರ್ಯ ರಸವತ್ತಾದ ಆಹಾರಗಳು, ನೃತ್ಯ ಸಂಗೀತ ಅನುಭವಿಸಲಿಕ್ಕೆ ನಮಗೆ ಸಿಕ್ಕೇಇಲ್ಲ. ಅದನ್ನೆಲ್ಲಾ ದೇವರ ಹೆಸರಿನಲ್ಲಿ ಸೇರಿಸಿಬಿಟ್ಟಿದ್ದಾರೆ. ಅದನ್ನಾದರೂ ಮುಟ್ಟಿ ಕಣ್ಣಾದರು ಬಿಟ್ಟು ಹತ್ತಿರ ಹೋಗಿ ನೋಡೋಣವೆಂದರೂ ಅವಕಾಶ ಇಲ್ಲದಿರುವಾಗ ದೇವರನ್ನು ಕದಿಯುತ್ತಾರೆ ಎಂದರೆ ಎಷ್ಟು ಆಧೋಗತಿಗೆ ಇಳಿದಿದ್ದೇವೆ ಎನ್ನುವುದು ಅರ್ಥವಾಗುತ್ತದೆ. ಅವರಿಗೆ ಜ್ಞಾನ ಇದ್ದು ಮನಷತ್ವ ಬೆಳೆದು ಪಾಪಪುಣ್ಯದ ವಿವೇಚನೆ ಇದ್ದರೆ ನಮ್ಮ ಸಂಸ್ಕೃತಿ ಬಂಡಾರದ ಗುರುತು ಅವರಿಗೆ ಇದ್ದರೆ ಮಾನವೀಯತೆ ಅವರಿಗೆ ಬೆಳೆದಿದ್ದರೆ ದೇವರ ವಿಗ್ರಹವನ್ನು ಈ ಜಗತ್ತಿನಲ್ಲಿ ಯಾರು ಕದಿಯುತ್ತಾರೆ. ಅವರು ಹೀಗೆ ಮಾಡುವುದಕ್ಕೆ ಏನು ಕಾರಣವೆಂದರೆ ಅವರಿಗೆ ಬಿಲ್ವತ್ರೆಗೂ, ಗರಿಕೆಗೂ, ಜೆಂಕೆಗೂ ಗರುಡನಿಗೂ ವ್ಯತ್ಯಾಸ ಗೊತ್ತಿಲ್ಲ, ಕಾಗೆಗೂ ಗರುಡನಿಗೂ ವ್ಯತ್ಯಾಸ ಗೊತ್ತಿಲ್ಲ ನಿರ್ಜೀವ ಸಾಕಾರ ನಿರಾಕಾರ ವೇದ ಧರ್ಮ ಮಿಮಾಂಸಗಳಲ್ಲಿ ಅಡಗಿರತಕ್ಕಂಥದ್ದನ್ನು ತಿಳಿಯುವುದಕ್ಕೆ ಜೀವನದಲ್ಲಿ ಅವಕಾಶವಿಲ್ಲ. ಅಂಥ ದೌರ್ಭಾಗ್ಯದ ಜನ ದೇವರನ್ನು ದೇವಸ್ಥಾನವನ್ನು ಏನು ಬೇಕಾದರು ಮಾಡಿಬಿಡುತ್ತಾರೆ. ಆದರೆ ಆದನ್ನು ಕಂಡ ಜನ ಆಯ್ಯೋ ಎಂದರೆ ಅವರಿಗೆ ಆಯ್ಯೋ ಎನ್ನತಕ್ಕಂಥ ರೂಪರೇಖೆ ಅರಿವು ಅವರಲ್ಲಿ ಬೆಳೆದಿಲ್ಲ. ಅಂಥವರಿಗೆ ವಿದ್ಯೆಯನ್ನು ದೊರಕಿಸದೆ ಇರತಕ್ಕಂಥಾದ್ದು ನಮ್ಮ ದೌರ್ಭಾಗ್ಯ ಆದು ಸಮಾಜದ ದುರ್ಗತಿ ಎಂದು ನಾನು ಅಂದುಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.— ಈ ಆಧೋಗತಿಗೆ ಬರುವುದಕ್ಕೆ ಕಾರಣವನ್ನು ಸ್ವಲ್ಪ ಹೇಳಿ.

ಶ್ರೀ ಕೆ. ಪ್ರಭಾಕರ್.— ಆದನ್ನೇ ಹೇಳುತ್ತೇನೆ. ಈ ಆಧೋಗತಿಗೆ ಬರುವುದಕ್ಕೆ ದೇವರ ಭಾವನೆ, ದೇವಸ್ಥಾನವೇ ಸಮಾಜಕ್ಕೆ ಗೊತ್ತಿಲ್ಲದ ಜನರು ಹೇಳತಕ್ಕಂಥ ಮಾತು.

ಶ್ರೀ ಲಕ್ಷ್ಮೀಸಾಗರ್.— ''ಕಲ್ಲನಾಗರ ಕಂಡರೆ
ಹಾಲನು ಎರೆವರು,
ದಿಟ ನಾಗನ ಕಂಡರೆ
ಹೊಡೆಹೊಡೆ ಎಂಬುವರು''.

ಇದಕ್ಕೆ ಕಾರಣವೇನು ಸ್ವಾಮಿ?

ಶ್ರೀ ಕೆ. ಪ್ರಭಾಕರ್.— ಒಂದು ರೀತಿಯಲ್ಲಿ ದೇವರು ಎನ್ನತಕ್ಕಂಥ ಭಾವನೆ ಇದೆಯಲ್ಲ ಆದನ್ನು ಯಾವ ರೀತಿ ಭಾವಿಸುತ್ತಾರೆ, ಅದರಂತೆ ಆಗುತ್ತದೆ. ತಮ್ಮ ಮಾತಿನ ಸಾಮರಸ್ಯ ಆಧೋಗತಿಗೆ ಬರಕವುದಕ್ಕೆ ಯಾರು ಕಾರಣರು ಎಂದರೆ ತಮ್ಮಲ್ಲಿ ಸಮಾಧಾನವಿದ್ದರೆ ಅದಕ್ಕೆ ಉತ್ತರ

ಹೇಳುತ್ತೇನೆ 'ದೇವ ಎನ್ನುವ ಭಾವನೆ ಇದ್ದರೆ ಅದಕ್ಕೆ ಉತ್ತರ ಹೇಳುತ್ತೇನೆ'. ಒಂದು ಸಲ ನಮ್ಮ ದೇಶದಲ್ಲಿ ಪುಣ್ಯ ನಮ್ಮ ಕಣ್ಣಾರೆ ನೋಡತಕ್ಕಂಥ ಕಾಲದಲ್ಲಿ ಸಮಾಜ ಹೋಗುತ್ತಾ ಇದೆ, ಇದು ಹೇಗೆ ನಡೆಯುತ್ತದೆ ಎಂದರೆ ನಮ್ಮ ಮಿತ್ರರು ಹೇಳಿದರು ಕ್ಯಾಬರೆ ಎಂದರೆ ಕ್ಯಾಬಿನೈ ಬರೆಬೆತಲೇ ಎನ್ನುವ ಕಾಲ ಬಂದಿದೆ. ಈ ಕಾಲದಲ್ಲಿ ಮೋಹಕ್ಕೆ ಬಿದ್ದಂಥ ಜನರ ಗೋಳನ್ನು ನೋಡಿದರೆ ಹಿಂದಿನ ಸ್ಥಿತಿ ಹೇಗಿತ್ತು, ಈಗ ಏನಾಗಿದೆ, ಇಷ್ಟೊಂದು ಅಧೋಗತಿಗೆ ಬರಲು ಕಾರಣರು ಯಾರು ಎನ್ನುವುದಕ್ಕೆ ಉತ್ತರ ಹೇಳುವುದು ಕಷ್ಟ. ಆದರೂ ಕೂಡ ಸಮಾಜಕ್ಕೆ ಅಂಟಿಕೊಂಡಿರುವುದರಿಂದ ನಾಲ್ಕು ಮಾತುಗಳನ್ನು ಹೇಳುತ್ತಿದ್ದೇನೆ. ಅಧೋಗತಿ ಎಂದರೆ ದೇವರು ಎನ್ನುವುದಕ್ಕೆ ವೇದವನ್ನು ಹೇಳಿರುವುದಲ್ಲ ಅದನ್ನು ಬ್ರಹ್ಮ, ವಿಷ್ಣು, ಈಶ್ವರ ಹೇಗಾದರೂ ಕರೆಯಿರಿ. ನಮಗೆ ವೇದಾಂತದಲ್ಲಿ ಭೇದ ಇಲ್ಲ. ನನ್ನ ಗೆಳೆಯರಾದ ಮಾಯಣ್ಣನವರು ಮಾತನಾಡುತ್ತಾ ಹೇಳಿದರು. ಎಲ್ಲಿ ಊರು ಇರುತ್ತದೆ. ಅಲ್ಲಿ ಒಂದು ಕೆರೆ ಕಟ್ಟೆ ಇರುತ್ತದೆ. ಅಲ್ಲಿಒಂದು ಪರಸೆ, ಜಾತ್ರೆ ನಡೆಯುತ್ತದೆ. ಆದರೆ ಈಗ ಅದೆಲ್ಲ ನಾಶವಾಗಿ ಹೋಗಿದೆ. ದೇವರಿಗೆ ಆರತಿ ಎಂದು ಮಾಡುತ್ತಾರೆ. ಅವರು ಅತ್ತಕಡೆ ತೆಗೆದುಕೊಂಡುಹೋಗಬೇಕೆಂದರೆ ಇವರು ಇತ್ತಕಡೆ ತಿರುಗಬೇಕೆಂದರೆ ಇವರು ಇತ್ತಕಡೆ ತೆಗೆದುಕೊಂಡು ಹೋಗಬೇಕು ಎನುತ್ತಾರೆ. ಅವರು ಅತ್ತಕಡೆ ತಿರುಗಬೇಕೆಂದರೆ ಇವರು ಇತ್ತ ಕಡೆ ತಿರುಗಬೇಕೆಂದು ಹೇಳುವ ಒಂದು ಭೇದ ಒಂದು ರಗಳೆಯಿಂದ ಕಾದಾಡುತ್ತಾರೆ. ಅಂಥ ಪರಿಸರ ಬೆಳೆದುಬಿಟ್ಟಿದೆ. ಅದನ್ನೆಲ್ಲ ಸೇರಿಸಿಕೊಂಡು ದೇವರು, ದೇವರು ಎಂದು ತಬ್ಬಿಕೊಳ್ಳುವುದಕ್ಕೆ ಹೋದರೆ ಸಮಾಜದ ಪ್ರಗತಿಗೆ ಅಡ್ಡ ಬರುತ್ತದೆ ಎನ್ನುವುದು ನನ್ನ ಭಾವನೆ. ಆದ್ದರಿಂದ ಎಲ್ಲ ಜನರನ್ನು ತಬ್ಬಿ ಹಿಡಿದುಕೊಂಡು ಬನ್ನಿ ಎಂದು ಹೇಳತಕ್ಕಂಥ ಬುದ್ಧಿ ಆತುರ ಇರತಕ್ಕಂಥ ಭಾವನೆ ಏನು ಇದೆ. ಹಾಗೆಯೇ ದೇವರಲ್ಲಿ ಒಳ್ಳೆಯ ಭಾವನೆ ಬೆಳೆಯಬೇಕು. ಅದನ್ನು ಬೇಡವೆಂದು ಹೇಳುವುದಿಲ್ಲ. ಸಮಾಜದಲ್ಲಿ ವ್ಯಕ್ತಿ ಹೇಗೆ ಅಧೋಗತಿಗೆ ಬಂದ ಎನ್ನುವುದನ್ನು ಹೇಳುತ್ತೇನೆ. ನಮ್ಮ ದೇಶದಲ್ಲಿ ೬೦ ಕೋಟಿ ೭೦ ಕೋಟಿ ಜನ ಏನು ಇದ್ದಾರೆ ಅದರಲ್ಲಿ ಕರ್ನಾಟಕದಲ್ಲಿ ೩೫–೪೦ ಲಕ್ಷ ಜನರನ್ನು ದೇವಸ್ಥಾನ ಎಂದರೆ ಎಷ್ಟು ದೂರ ಎನ್ನುವ ರೀತಿಯಲ್ಲಿ ಅವರನ್ನು ಇಟ್ಟು ಬಿಟ್ಟಿದ್ದಾರೆ. ದೇವಸ್ಥಾನ ಎಂದಕೂಡಲೇ ಅವರು ಯಾರು. ಇವರು ಯಾರು ಎನ್ನುವ ಮಟ್ಟದಲ್ಲಿ ಇಟ್ಟಿರುತ್ತಾರೆ.

ಭೇದಕ್ಕೆ ಯಾವುದಾದರೂ ರೂಪದಲ್ಲಿ ಮಾರ್ಗ ಮಾಡಿಕೊಡುವುದಾದರೆ, ದೇವರ ಹೆಸರಿನಲ್ಲಿ ದೇವಸ್ಥಾನದ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಸಂಸ್ಕೃತಿ ಹೆಸರಿನಲ್ಲಿ ಇವುಗಳು ಬೆಳೆಯುವುದು ಬೇಡ. ಆತ್ಮವನ್ನು ಒಪ್ಪಿರತಕ್ಕ ಮಾನವ ತ್ರಿಕರಣ ಶುದ್ಧಿಯಾಗಿ ಪಂಚಭೂತ ಮಾನವನೆನ್ನು ಕೀಳು ಎನ್ನತಕ್ಕ ಭಾವನೆಯಿಂದ ನೋಡುವುದು ರೂಢಿಯಾಗಿದೆ. ದೇವಾಲಯದ ಸಂಸ್ಕೃತಿಯನ್ನು ಇಟ್ಟುಕೊಳ್ಳುವುದಾದರೆ ಆ ರೀತಿ ಬೆಳೆಯುವುದು ಬೇಡ ಎನ್ನತಕ್ಕದ್ದು ಸ್ವಾಭಾವಿಕ. ನಮ್ಮ ಅಧೋಗತಿ ಕಂಡರೂ ಕೂಡ, ಈ ದೇವಾಲಯ ಆಸ್ತಿಯನ್ನು ಬೆಳೆಸಲಿ ಅಲ್ಲಿ ವಿದ್ಯಾಭ್ಯಾಸ ನಡೆಯಲಿ, ಅಲ್ಲಿ ಸಂಸ್ಕೃತಿ ಬೆಳೆಯಲಿ ಆ ನಂಬಿಕೆ ನಮಗೆ ರೂಢಿ ಮೂಲವಾಗಿದೆ. ಆದುದರಿಂದ ಬೋರ್ಡ್ ಎನ್ನತಕ್ಕದ್ದು ಇದು ಆಗಬೇಕು. ಬೋರ್ಡ್ ಆಗಿ ಇದು ನಿರ್ಬೇಧವಾಗಿ ಜನರ ಸಂಸ್ಕೃತಿಯನ್ನು ಬೆಳೆಸಿರಿ. ಈ ಒಂದು ಬೋರ್ಡ್ ಆಗ ಬೇಕೆಂದು ನಾನು ಮನಃ ಪೂರ್ವಕವಾಗಿ ಬೆಂಬಲ ಕೊಡುತ್ತೇನೆ. ಬೇದಾಧಿಗಳ ದೇವಾಲಯ ಇರಬಾರದೆಂದು ಹೇಳಿ; ಉದಾಹರಣೆಗೆ 'ಸೂರ್ಯಂಗೆ ಸೋಡರೆ' ಸೂರ್ಯನಿಗೆ ಹಗಲಿನಲ್ಲಿ ಪೂಜು ಹಿಡಿದು ತೋರಿಸತಕ್ಕದ್ದು ನಗೆಪಾಟಲಿನ ವಿಷಯ. ದೇವಾಲಯಂಗಳಿಗೆ ಅನ್ಯಾಯವಾಗುತ್ತಿದೆ ಅಂದರೆ, ಅಲ್ಲಿ ಭೇದ ಬರುತ್ತದೆ. ದೇವಾಲಯಗಳಿಗೆ ಅನ್ಯಾಯವಾಗುತ್ತಿದೆ ಅನ್ನುವುದಕ್ಕೆ ಅಷ್ಟೆ ತಪ್ಪು, ಅಲ್ಲಿ ಮೊದಲು ಭೇದ ಹೋಗಬೇಕು. ಆದುದರಿಂದ ನಮ್ಮ ಸಂಸ್ಕೃತಿ ಪ್ರಧಾನವಾದುದು ಅವುಗಳು ಬೆಳೆಯಲಿ. ಕಡೆಗೆ ಒಂದು ವಿಷಯ ಹೇಳುತ್ತೇನೆ, ಹೇಳದಿದ್ದರೆ ವಿಧಿಯಿಲ್ಲ. ನಾವು ಪ್ರಜಾಪ್ರಭುತ್ವ ಆದುಕೊಳ್ಳವಾಗ, ಸೆಕ್ಯುಲರ್ ಸ್ಟೇಟ್ ಎನ್ನುವುದು ಅದರ ಜೊತೆಯಲ್ಲಿಯೇ ಇದೆ. ಬಿಸಿಲು ಇದ್ದಾಗ ಮರದ ನೆರಳು ಇರುತ್ತದೆ. ಮೋಡ ಬಂದು ಬಿಸಿಲು ಇಲ್ಲದ ದಿನ, ಮರ ಇರುತ್ತದೆ ಆದರೆ ಅದರ ನೆರಳನ್ನು ಕಾಣಂವುದಕ್ಕೆ ಆಗಂವುದಿಲ್ಲ. ಈ ಸೆಕ್ಯುಲರ್ ಸ್ಟೇಟ್‌ನಲ್ಲಿ ಸರ್ಕಾರ ದೇವಾಲಯಗಳನ್ನು ಬೆಳೆಸಬೇಕು. ಅದು ಅವರ ಕರ್ತವ್ಯ ಎನ್ನತಕ್ಕದ್ದರಲ್ಲಿ ಒಂದು ತೊಡಕು ಇದೆ. ಇಲ್ಲಿ ಎಲ್ಲರ ಧರ್ಮವೂ ಬೆಳೆಯಬೇಕು ಎಲ್ಲರ ದೇವಾಲಯಗಳು ಬೆಳೆಯಬೇಕು. ಜನಜೀವನಕ್ಕೆ ಪ್ರಭುಲ್ಲವಾಗಿರತಕ್ಕಂತಹ ಎಲ್ಲಾ ವಿಚಾರಗಳು ಬೆಳೆಯುವುದಕ್ಕೆ ಸರ್ಕಾರ ಬೆಂಬಲ ಕೊಡಬೇಕೆಂದು ಹೇಳುತ್ತಿದ್ದೇನೆ. ಈಗ ನಮ್ಮಲ್ಲಿ ಬಡವರು ಚಿಕ್ಕಪುಟ್ಟ ಜನ ಏನಿದ್ದಾರೆ ಅವರ ಬಗ್ಗೆ ನಮ್ಮ ಮಾನ್ಯ ಮುಜರಾಯಿ ಮಂತ್ರಿಗಳು ಉತ್ತರ

ಕೊಡುವಾಗ ಹೇಳುತ್ತಾರೆ. ಈ ಇಲಾಖೆಯ ಪಟ್ಟಿಯನ್ನು ತೆಗೆದು ನೋಡಿದರೆ, ಬಡವರು ಪೂಜೆ ಮಾಡತಕ್ಕಂತಹ ದೇವರುಗಳನ್ನು ನಾನ್–ಮುಜರಾಯಿ ಎಂದು ಮಾಡಿಕೊಂಡಿದ್ದಾರೆ. ನಾನ್ ಮುಜರಾಯಿ ಎಂದರೆ 'ನಾನು' ಎಂದು ಬರುತ್ತದೆ, ಇಲ್ಲದಿದ್ದರೆ ನೀನೇ ಬಂದದ್ದನ್ನೆಲ್ಲಾ ನೀನೇ ಉಂಡು ಬಿಟ್ಟು ಅವೆಲ್ಲಾ ನಾನೇ. ಅವುಗಳಿಗೆ ದಿಕ್ಕೇ ಇಲ್ಲ. ಅದಕ್ಕೋಸ್ಕರ ಪೂಜೆ ಮಾಡುವ ಈಶ್ವರ ಕರೆ ಈಶ್ವರ. ಚಿಕ್ಕ ಈಶ್ವರ ಕರೆ ವೆಂಕಟರಮಣಸ್ವಾಮಿ ಎಂತಲೂ ಅವರ ಭಾವನೆ. ಬಡವರು ದೇವರನ್ನು ತಬ್ಬಿದರೂ ಕೂಡ ಭಕ್ತಿ ಪೂರ್ವಕವಾಗಿರುವ ಬಡವನನ್ನು ಅವನ ದೇವರು ಮುಜರಾಯಿ ಇಲಾಖೆಯಲ್ಲಿ ಕಡಿಮೆ ಇವೆ. ದೊಡ್ಡವರ ದೇವರು ಅಂದರೆ ಚಿನ್ನ, ಬೆಳ್ಳಿ, ಬಂಗಾರ ವಜ್ರ ವೈಡೂರ್ಯ, ಹಾಲು, ಮೊಸರು, ಹೂವ, ನವರುಬಟ್ಟೆ ಇವೆಲ್ಲಾ ಕಂಕಣಬದ್ಧವಾಗಿರುವ ದೇವರು, ದೊಡ್ಡದು ಇದೆ ಎನ್ನತಕ್ಕ ಪದ್ಧತಿಯನ್ನು ನಮ್ಮಲ್ಲಿ ತಂದಿದ್ದಾರೆ. ಈ ಪದ್ಧತಿಯನ್ನು ನಾನು ಒಪ್ಪುವುದಿಲ್ಲ. ಆದ್ದರಿಂದ ದೇವಾಲಯಗಳನ್ನು ಉದ್ಧಾರ ಮಾಡುವುದರಲ್ಲೂ ಬಡವ–ಬಲ್ಲಿದ, ಮೇಲು–ಕೀಳು, ಬೇಕು–ಬೇಡ, ಹಾಗೆ–ಹೀಗೆ, ಹೋಗು–ಬಾ ಅನ್ನತಕ್ಕ ಬೇಧಗಳು ಹೋಗಲು ಒಂದು ಬೋರ್ಡನ್ನು ಬೇಗ ತಂದು ನಮ್ಮ ಸಮಾಜವನ್ನು ಬೆಳಸತಕ್ಕ ರೀತಿಯಲ್ಲಿ ಆ ಒಂದು ಬೋರ್ಡ್ ಬರಲಿ ಎಂದು ಹೇಳಿ, ಆ ಬೋರ್ಡನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಇದನ್ನೆಲ್ಲಾ ಕೇಳಿದ ನಂತರ ದೇವರಿಗೆ ಒಂದು ಸಂಘ ಕಟ್ಟಬೇಕಾಗಿದೆ.

ಉಪಾಧ್ಯಕ್ಷರು.—ಕುಮಾರಿ ಪ್ರಮಿಳಾರವರು ತಾವು ೨ ನಿಮಿಷ ಮಾತನಾಡಿ.

ಕುಮಾರಿ ಎಸ್. ಪ್ರಮಿಳಾ.—ದೇವಾಲಯಗಳಲ್ಲಿ ಹೆಣ್ಣು ದೇವರುಗಳು ಇವೆ. ಏಕೆಂದರೆ ನೀವು ೨ ನಿಮಿಷ ಮಾತನಾಡಿ ಅಂದ್ರಿ ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ದೇವರು ಅಂದರೆ ಏನು? ಎಷ್ಟು ವಿಧವಾದ ದೇವರುಗಳು ಇವೆ ? ದೇವರಲ್ಲಿ ಹೆಣ್ಣು ದೇವರು ಇದ್ದಾರಾ? ಗಂಡು ದೇವರು ದೇವರು ಇದ್ದಾರಾ? ಅದಕ್ಕೆ ಆಧಾರವೇನು? ದಯವಿಟ್ಟು ಪ್ರಮಿಳಾರವರು ಹೇಳಬೇಕು ?

ಶ್ರೀ ಬಿ. ಭಾಸ್ಕರಶೆಟ್ಟಿ.—ಹೆಣ್ಣು ದೇವರುಗಳೇ ಜಾಸ್ತಿ. ಮತ್ತೆ ಯಾವುದಾದರೂ ದೇವರು ಇದ್ದಾರಾ ಎಂದು ನೋಡಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ದೇವರು ಒಬ್ಬನೆ. ನಾವುಗಳು ಹಲವು ಎಂದು ನಾನು ತಿಳಿದು ಕೊಂಡಿದ್ದೇನೆ. ಆವನು ನಿರಾಕಾರನಾದವನು, ಮಾತಿಗೆ ಸಿಲುಕದಂತಹವನು ವರ್ಣನಾತೀತವಾದಂತಹ ಲಿಂಗಬೇಧ ಇಲ್ಲದೆ ಇರತಕ್ಕವನೆಂದು ನಾನು ತಿಳಿದುಕೊಂಡಿದ್ದೇನೆ. ದೇವರು ಎನ್ನುವಾಗ ಇದರಲ್ಲಿ ಹೆಣ್ಣು ದೇವರು ಬೇರೆ ಇದ್ದಾರೆ, ಗಂಡು ದೇವರು ಬೇರೆ ಇದ್ದಾರೆ. ಹೆಂಡ ಕುಡಿಯುವ ದೇವರು ಬೇರೆ ಇದ್ದಾರೆ, ದನ ತಿನ್ನುವ ದೇವರು ಬೇರೆ ಇದ್ದಾರೆ. ಬರೀ ಘಂ–ಪತ್ರಂ–ಓಂ ಅಷ್ಟು ಮಾತ್ರ ತೆಗೆದು ಕೊಳ್ಳುವ ದೇವರು ಇದ್ದಾರೆಂದು ಹೇಳಿದರೆ ಅದು ಅರ್ಥವಾಗದಿರುವ ಜಟಿಲವಾದ ಪ್ರಶ್ನೆ, ಇದಕ್ಕೆ ಉತ್ತರ ಕೊಡುವುದು ಒಳ್ಳೆಯದು.

ಶ್ರೀ ಮೈಕಲ್ ಬಿ. ಫರ್ನಾಂಡಿಸ್.—ದೇವರ ಸಂಘ ಇದೆ ಎಂದು ಹೇಳಿದರೆ ಅದು ಉತ್ತಮ ಟ್ರೇಡ್ ಯೂನಿಯನ್ ತರಹ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಲಿಂಗದ ದೇವರು ಕೂಡ ಇದ್ದಾರೆಂದೂ ನೋಡಬೇಕಾಗಿದೆ.

ಶ್ರೀ ಕೆ. ಪ್ರಭಾಕರ್.—ನಮ್ಮ ನಾಯಕರು ಈ ವಿಧಾನಸಭೆಯಲ್ಲಿ ಮಾತನಾಡುವುದು ಬಹು ಕಷ್ಟ ಎನ್ನತಕ್ಕ ಮಟ್ಟದಲ್ಲಿ ಒಂದು ಮಾತು ಹೇಳಿದ್ದಾರೆ. ಅದನ್ನು ಚಿಕ್ಕದಾಗಿ ಇಳಿಸಿ ಹೇಳುವುದಾದರೆ, ಲಿಂಗಬೇಧವಾದ ದೇವರು ಇದ್ದಾನೆ. ಇದ್ದಾನೆಂದೂ ಹೇಳುವಾಗ ಅವರು ಪುಲ್ಲಿಂಗದಲ್ಲಿ ಹೇಳುತ್ತಿದ್ದಾರೆ ಅದಕ್ಕೋಸ್ಕರ ಆದಿಶಕ್ತಿ, ಸರಸ್ವತಿ, ಲಕ್ಷ್ಮಿ ಸ್ತ್ರೀಲಿಂಗ ಲಿಂಗತೀತವಾದ ದೇವರ ಹೆಸರನ್ನು ಯಾವರೀತಿ ಹೇಳುತ್ತಾರೆ ಎನ್ನುವುದನ್ನು ಅವರು ಹೇಳಲಿ.

ಕುಮಾರಿ ಎಸ್. ಪ್ರಮಿಳಾ.—ಮಾನ್ಯ ಉಪಾಧ್ಯಕ್ಷರೇ, ಇವತ್ತು ನಾವೆಲ್ಲರೂ ಬಹಳ ಸಂತೋಷವಾಗಿ ಈ ಮಸೂದೆಯ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಆದರೆ ನಾವು ಈ ಮಸೂದೆಯನ್ನು ತರುವುದಕ್ಕೆ ಮೊದಲು ದೇವಾಲಯಗಳ ಆಸ್ತಿಪಾಸ್ತಿ, ಮಠಗಳ ಆಸ್ತಿಪಾಸ್ತಿ ಏನಿದೆ. ಅದು ತಮಗೆಲ್ಲ

ರಿಗೂ ಗೊತ್ತಿದೆ. ಈಗಾಗಲೇ ೧೯೭೪ನೇ ಇಸವಿಯಲ್ಲಿ ಭೂಸುಧಾರಣಾ ಕಾನೂನನ್ನು ತಂದು ಇರತಕ್ಕ ಭೂಮಿಯನ್ನು "ಉಳುವವನಿಗೆ ಭೂಮಿ" ಎಂದು ಕೊಟ್ಟಿರುವಾಗ, ದೇವರುಗಳನ್ನು ರಕ್ಷಣೆ ಮಾಡುವವರಂ ಯಾರು ಕೂಡ ಬಂದಿಲ್ಲ. ಜಮೀನು ಇರುವವರು ಎಲ್ಲರೂ ಇರತಕ್ಕಂತಹ ಭೂಮಿಯನ್ನು ರೈತರಿಗೆ ಕೊಡಬೇಕೆಂದು ಕಾನೂನನ್ನು ತಂದಿದ್ದಾರೆ. ಇರುವ ಆಸ್ತಿಯನ್ನೆಲ್ಲಾ ಕೊಟ್ಟುಬಿಟ್ಟು ಬೋರ್ಡ್ ಮಾಡಿದರೆ ಆ ಬೋರ್ಡ್ ಮಾಡುವ ಕೆಲಸವಾದರೂ ಏನು ? ಯಾತಕ್ಕೋಸ್ಕರ ಬೋರ್ಡ್‌ನು ತರುತ್ತೀರಿ ? ಈ ನಿರ್ಣಯ ತರುವುದಕ್ಕೆ ಮುಂಚೆ ದೇವಸ್ಥಾನಗಳ ಆಸ್ತಿಯನ್ನು ಉಳಿಸಿಕೊಳ್ಳುವುದಕ್ಕೆ ನಿರ್ಣಯ ತಂದರೆ ಒಳ್ಳೆಯದು. ದೇವಸ್ಥಾನಗಳ ಆಸ್ತಿಪಾಸ್ತಿಯನ್ನು ಉಳಿಸುವುದಕ್ಕೆ ಕಾನೂನನ್ನು ತನ್ನಿ. ಆ ರೀತಿ ಮಾಡಿದರೆ ನಾವು ಕೂಡ ನಿಮ್ಮ ಜೊತೆ ಸೇರಿ ಈ ರೀತಿ ತರುವುದು ಒಳ್ಳೆಯದು ತನ್ನಿ ಎಂದು ಹೇಳಬಹುದಾಗಿತ್ತು. ಆದರೆ ಎಲ್ಲವನ್ನು ಕಳಿದುಕೊಂಡು ಮಠಗಳಲ್ಲಿ ಏನು ಇಲ್ಲದೆ ಇರತಕ್ಕ ಸಂದರ್ಭದಲ್ಲಿ ತಂದಿರುವುದು ಸೂಕ್ತವಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳು ಇದ್ದರೆ ಕೇಳಬಹುದಾಗಿತ್ತು. ಈ ಮಸೂದೆಯನ್ನು ತರುವುದಕ್ಕೆ ಒಪ್ಪುತ್ತೀರಾ ಅಥವಾ ಇಲ್ಲವೋ ಎಂದು. ದೇವಸ್ಥಾನ ಮತ್ತು ಮಠಗಳ ಆಸ್ತಿಗಳನ್ನು ಉಳಿಸಿಕೊಳ್ಳುವುದಕ್ಕೆ ತಕ್ಷಣ ಒಂದು ಕಾರ್ಯಕ್ರಮ ಹಾಕಿಕೊಂಡು ಎಲ್ಲೆಲ್ಲಿ ದೇವಸ್ಥಾನಗಳ ಮತ್ತು ಮಠಗಳ ಆಸ್ತಿಪಾಸ್ತಿಗಳು ಹೋಗಿವೆ ಆ ಆಸ್ತಿಗಳನ್ನು ಆ ದೇವರುಗಳಿಗೆ ವಾಪಸ್ಸು ಕೊಡಿಸುವುದಕ್ಕೆ ಒಂದು ಕಾನೂನು ತೆಗೆದುಕೊಂಡು ಬನ್ನಿ ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಆ ಕೆಲಸವನ್ನು ತಾವು ಮಾಡುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ.

MR. DEPUTY SPEAKER.—You have not been prevented from bringing such a resolution.

ಕುಮಾರಿ ಎಸ್. ಪ್ರಮಿಳಾ.—ಮಠಗಳ ಆಸ್ತಿಪಾಸ್ತಿಗಳ ಬಗ್ಗೆ ಒಂದು ಮಸೂದೆ ತನ್ನಿ' ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

MR. DEPUTY SPEAKER —Nobody would prevent you from bringing such a resolution. We will allow more time to your Resolution.

ಕುಮಾರಿ ಎಸ್. ಪ್ರಮಿಳಾ.—ನಾನು ಸಲಹೆ ಕೊಡುತ್ತಿದ್ದೇನೆ. ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ಇದು ತಿಳಿದುಕೊಳ್ಳಬೇಕಾದ ವಿಷಯ. ಅದರ ಬಗ್ಗೆ ಸೂಕ್ತವಾದ ಗಮನಹರಿಸಿ ದೇವಾಲಯಗಳ ರಕ್ಷಣೆ ಮಾಡುವುದಕ್ಕೆ ತೀರ್ಪುವಾಗಿ ಬೋರ್ಡ್ ಮಾಡುವುದಕ್ಕೆ ಬದಲು ಮೊದಲಿನ ಆಸ್ತಿಪಾಸ್ತಿಗಳನ್ನು ಅವರಿಗೆ ಕೊಡಿ. ಬೋರ್ಡನ್ನು ಆ ಮೇಲೆ ಮಾಡೋಣವೆಂದು ಕೇಳುತ್ತಿದ್ದೇನೆ. ಆಸ್ತಿಗಳು ಇಲ್ಲದಿರುವಾಗ ನೀವು ಬೋರ್ಡ್ ಮಾಡಿ ಪ್ರಯೋಜನವಿಲ್ಲ. ಇದರ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆ ರೀತಿ ಮಾಡುತ್ತಾರೆಂದು ಅಂದುಕೊಂಡಿದ್ದೇನೆ. ನಾನು ಯಾವುದೇ ಒಂದು ಕೋಮಿಗೆಂದು ಹೇಳುವುದಿಲ್ಲ. ಚರ್ಚ್ ಪಕ್ಕ್ ಬೋರ್ಡ್ ದೇವಾಲಯದ ಆಸ್ತಿಗಳೆಲ್ಲಾ ಸಾರ್ವಜನಿಕರ ಆಸ್ತಿಗಳು. ದೇವರಿಗೆ ಕೊಟ್ಟಂತಹ ಆಸ್ತಿಗಳು, ಮನಸ್ಸಿಗೆ ಸಂತೋಷವಾದಾಗ ದಾನಧರ್ಮವಾಗಲಿ ಎಂದು ಕೊಟ್ಟಿರುತ್ತಾರೆ ಅಂತಹ ಆಸ್ತಿಗಳನ್ನು ತೆಗೆದುಕೊಳ್ಳುವುದು ಒಳ್ಳೆಯದಲ್ಲ. ಅಂತಹ ಆಸ್ತಿಗಳನ್ನು ದೇವರುಗಳಿಗೆ ವಾಪಸ್ಸು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಉಪಾಧ್ಯಕ್ಷರೇ, ಈ ಮುಜರಾಯಿ ಸಂಸ್ಥೆ ಆಸ್ತಿಪಾಸ್ತಿಗಳ ಮೇಲ್ವಿಚಾರಣೆಗೆ ಮತ್ತು ದೇವಾಲಯಗಳ ಜೀರ್ಣೋದ್ಧಾರದ ಬಗ್ಗೆ ಒಂದು ಬೋರ್ಡನ್ನು ರಚಿಸುವ ಬಗ್ಗೆ ಮಾನ್ಯ ಡಿ.ಟಿ ಮಾಯಣ್ಣನವರು ಒಂದು ಖಾಸಗಿ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಅದಮ್ಮ ಬೆಂಬಲಿಸಿ ಕೆಲವು ಸದಸ್ಯರು ಒಳ್ಳೆಯ ಸೂಕ್ತವಾದಂತಹ ಸಲಹೆಗಳನ್ನು ಧರ್ಮಗಳ ಮೇಲೆ ದೇವರುಗಳ ಮೇಲೆಮತ್ತು ಕರ್ನಾಟಕ ರಾಜ್ಯದ ದೇವಾಲಯಗಳ ಹಿನ್ನೆಲೆ ಚರಿತ್ರೆ, ಮಹಿಮೆಯನ್ನು ಸಾರ್ವಜನಿಕರಿಗೆ ತಿಳಿಸಲಿಕ್ಕೆ ಮಾಡಲು ಅವರಲ್ಲಿ ಭಕ್ತಿಯನ್ನು ಹೆಚ್ಚಿಸುವುದಕ್ಕೋಸ್ಕರ ಕೆಲವು ಮಾನ್ಯ ಸದಸ್ಯರು ಬೆಂಬಲಿಸಿ ಸಲಹೆಗಳನ್ನು ಕೊಟ್ಟಿದ್ದಾರೆ. ಆದರಲ್ಲೂ ಮಾನ್ಯ ಗಂಗಾಧರನ್‌ರವರು ಕೊಟ್ಟಿರತಕ್ಕ ಸಲಹೆಗಳನ್ನು ತತ್ವಸಹಿತ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಇವತ್ತಿನ ದಿವಸ—ಈ ಕರ್ನಾಟಕ ರಾಜ್ಯದಲ್ಲಿ ಮುಜರಾಯಿ ಸಂಸ್ಥೆಗಳು ೫ ವಿವಿಧ ಆಧಿನಿಯಮಗಳ ವ್ಯಾಪ್ತಿಗೆ ಒಳಪಟ್ಟಿವೆ. ಈಗಾಗಲೇ ಸರ್ಕಾರ ಒಂದು ಮುಜರಾಯಿ ಟ್ರಸ್ಟ್ ಮಾಡಿದೆ. ಇರತಕ್ಕ ತೊಂದರೆಗಳನ್ನು ಸಂಧಾರಿಸುವುದಕ್ಕೋಸ್ಕರ ಏಕರೂಪದ ಕಾನೂನನ್ನು ತರಲು ಸರ್ಕಾರ ಪರಿಶೀಲಿಸುತ್ತಿದೆ. ಆ ಕಾನೂನು ಸಹಿತ

ಸಿದ್ಧವಾಗಿದೆ. ಆ ಒಂದು ಕಾನೂನನ್ನು ತರುವಾಗ ಮಾನ್ಯ ಸದಸ್ಯರುಗಳು ಕೊಟ್ಟಿರತಕ್ಕ ಸಲಹೆಗಳನ್ನು ಸಹ ಗಮನದಲ್ಲಿಟ್ಟುಕೊಂಡು ಕಾನೂನನ್ನು ತರಲಾಗುವುದು. ಈ ವಿಧಾನ ಸಭಾಧೀವೇಶನ ಮುಗಿಯುವುದರೊಳಗೆ ಕಾನೂನನ್ನು ತರಬೇಕೆಂದು ಸರ್ಕಾರ ಒಂದು ಹೆಚ್ಚಿನ ಆಸಕ್ತಿಯಿಂದ ಆದರಿಸುತ್ತಿದೆ ನಾವು ತರಬೇಕೆಂದಿರುವ ಕಾನೂನಿನಲ್ಲಿ ಇಂತಹ ಒಂದು ಮಂಡಳಿಯನ್ನು ರಚನೆ ಮಾಡುವ ವಿಚಾರವೂ ಸಹ ಇದೆ ಎಂದು ನಾನು ಈಗಾಗಲೇ ಈ ಇಲಾಖೆಯ ಬೇಡಿಕೆಗಳಿಗೆ ಉತ್ತರ ಕೊಡುವಾಗ ಹೇಳಿದ್ದೇನೆ. ಈ ಕಾರಣದಿಂದ ಮಾನ್ಯ ಸದಸ್ಯರಾದಂಥ ಶ್ರೀ ಡಿ.ಟಿ. ಮಾಯಣ್ಣನವರು ಈ ಸಭೆಯಂ ಮುಂದೆ ಏನು ಒಂದು ಖಾಸಗಿ ನಿರ್ಣಯ ತಂದಿದ್ದಾರೆ, ಇದನ್ನು ವಾಪಸ್ ಪಡೆಯಬೇಕೆಂದು ತಮ್ಮ ಮುಖಾಂತರ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಟಿ. ಮಾಯಣ್ಣ —ಮಾನ್ಯ ಅಧ್ಯಕ್ಷರೇ, ನಮ್ಮ ಹಿಂದೂ ದೇಶದಲ್ಲಿ ಬೇರೆ ಬೇರೆ ಮತಗಳಿದ್ದರೂ ಸಹ ಎಲ್ಲರೂ ಈ ಹಿಂದೂ ಪುಣ್ಯ ಭೂಮಿಯಲ್ಲಿಯೇ ವಾಸ ಮಾಡುತ್ತಿದ್ದೇವೆ. ಈ ಕಾರಣದಿಂದ ನಾನು ಈ ನಿರ್ಣಯವನ್ನು ವಿಸ್ತಾರವಾದ ಭಾವನೆಯಿಂದ ತಂದಿದ್ದೇನೆ. ಎಲ್ಲ ಮತಧರ್ಮದವರೂ ಈ ನಮ್ಮ ಪವಿತ್ರ ಭೂಮಿಯಲ್ಲಿ ಪೊದಲಿನಿಂದಲೂ ವಾಸ ಮಾಡಿಕೊಂಡು ಬಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇದೇ ಕಾರಣದಿಂದ ಈ ನನ್ನ ನಿರ್ಣಯಕ್ಕೆ ಬೆಂಬಲ ಕೊಟ್ಟಂತಹ ನನ್ನ ಸ್ನೇಹಿತರೆಲ್ಲರೂ ಅನೇಕ ವಿಷಯಂಗಳನ್ನು ಹೇಳಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ದೇವಸ್ಥಾನಗಳಿವೆ. ಇದರ ಜೊತೆಗೆ ನಾವು ನಮ್ಮದೇ ಆದಂಥ ಕಲೆ ಹಾಗೂ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದ್ದೇವೆ. ಇದಕ್ಕೆ ನಮ್ಮ ರಾಜ್ಯದಲ್ಲಿ ಒಂದು ರೀತಿಯ ವೈಶಿಷ್ಟ್ಯವಿದೆ. ಈ ನಮ್ಮ ಒಂದು ವೈಶಿಷ್ಟ್ಯವನ್ನು, ಕಲೆ ಹಾಗೂ ಸಂಸ್ಕೃತಿಯನ್ನು ನಮ್ಮ ಸರ್ಕಾರ ಇಲ್ಲಿಯವರೆಗೆ ಉಳಿಸಿಕೊಂಡು ಬಂದಿದೆ. ಇದರ ಜೊತೆಗೆ ಇದಕ್ಕಾಗಿಯೇ ಒಂದು ಪ್ರತ್ಯೇಕ ಮಂಡಲಿಯನ್ನು ರಚಿಸಿದರೆ, ಆ ಮಂಡಲಿಯವರು ನಮ್ಮ ರಾಜ್ಯದಲ್ಲಿರುವ ಎಲ್ಲ ದೇವಸ್ಥಾನಗಳನ್ನು ಹುಡುಕಿ ಅವುಗಳ ಜೀರ್ಣೋದ್ಧಾರದ ಕಡೆಗೆ ಗಮನ ಕೊಡುತ್ತಾರೆ. ಆದಕಾರಣ ಇಂತಹ ಮಂಡಳಿಗಾನ್ನು ರಚನೆ ಮಾಡಿ ಅದು ಏನೇನು ಕೆಲಸ ಮಾಡಬೇಕು, ಯಾವ ರೀತಿ ನಡೆಯಬೇಕು ಹಾಗೂ ದೇವಸ್ಥಾನಗಳ ಆಸ್ತಿಯನ್ನು ಯಾವ ರೀತಿ ನೋಡಿಕೊಳ್ಳಬೇಕು ಎಂಬುದನ್ನು ತಿಳಿಸಬೇಕು. ಪ್ರತಿಯೊಂದು ಧರ್ಮಕ್ಕೂ ಒಂದು ನೀತಿ ನಿಯಮವಿದೆ. ಒಂದೊಂದು ಧರ್ಮದವರು ಒಂದೊಂದು ರೀತಿಯಲ್ಲಿ ದೇವರ ಪೂಜೆ ಮಾಡುತ್ತಾರೆ. ನಾವು ವಿಗ್ರಹಾರಾಧಕರೆಂದು ಹೇಳುತ್ತಾರೆ. ನಮ್ಮ ಒಂದು ಧರ್ಮ ಹಾಗೂ ಸಂಸ್ಕೃತಿಯ ಪ್ರತೀಕವಾಗಿ ಒಳ್ಳೆಯ ಒಂದು ವಾತಾವರಣದಲ್ಲಿ ದೇವರ ಪೂಜೆ ಮಾಡಲಂ ಪ್ರತಿಯೊಂದು ಹಳ್ಳಿಯಲ್ಲಿಯೂ ದೇವಸ್ಥಾನಗಳನ್ನು ಕಟ್ಟಿಸಲಾಗಿದೆ. ಆದಕಾರಣ ಇವುಗಳ ಒಂದು ಸಂರಕ್ಷಣೆಗಾಗಿ ಒಂದು ಮಂಡಲಿ ಇರುವುದು ಅಗತ್ಯವಿದೆ. ಇವನ್ನು ಸರ್ಕಾರದವರು ರಚನೆ ಮಾಡುವವರೆಗೆ ಈ ನನ್ನ ನಿರ್ಣಯ ಜಾರಿಯಲ್ಲಿರುವುದು ಅಗತ್ಯವಾದ ಕಾರಣ ಇದನ್ನು ಓಟಿಗೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ —ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಕೊಟ್ಟಿರುವ ಎಲ್ಲ ಸಲಹೆಗಳೂ ಒಳಗೊಂಡಂತಹ ರೀತಿಯಲ್ಲಿ ಒಂದು ಕಾನೂನು ತರುವುದಾಗಿ ಮಾನ್ಯ ಮಂತ್ರಿಗಳು ಈಗಾಗಲೇ ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಗತವೈಭವವನ್ನು ಸಾರಿ ಹೇಳುವಂತಹ ನಮ್ಮ ಹಿಂದೂ ದೇವಾಲಯುಗಳ ಪುನರ್–ನಿರ್ಮಾಣ, ಅವುಗಳ ಆಸ್ತಿಯನ್ನು ಕಾಪಾಡುವಂತಹ ವಿಚಾರ, ಹಿಂದೂ ದೇವಾಲಯಗಳಿಗೆ ಸೇರಿದ ಮಠಗಳ ಸಂರಕ್ಷಣೆ ಮಾಡುವ ವಿಚಾರ ಹಾಗೂ ಇದಕ್ಕಾಗಿ ಪ್ರತ್ಯೇಕ ಆಡಳಿತ ಮಂಡಲಿ ರಚನೆ ಮಾಡುವ ವಿಚಾರದಲ್ಲಿ ಒಂದು ಕಮಿಟಿ ರಚನೆ ಮಾಡಲಾಗಿದ್ದು, ಅದಕ್ಕೆ ನಾನೇ ಅಧ್ಯಕ್ಷನಾಗಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ನಮ್ಮ ನೆರೆಹೊರೆ ರಾಜ್ಯಗಳಾದ ತಮಿಳುನಾಡು, ಆಂಧ್ರ, ಮಹಾರಾಷ್ಟ್ರ ಹಾಗೂ ಕೇರಳಾದಲ್ಲಿರುವಂತಹ ಶಿತ್ಕುತ್ತಮವಾದಂಥ ದೇವಸ್ಥಾನಗಳನ್ನು ಅಲ್ಲಿನ ಸರ್ಕಾರದವರು ಯಾವ ರೀತಿ ನೋಡಿಕೊಳ್ಳುತ್ತಿದ್ದಾರೆ, ಅಲ್ಲಿನ ಆಡಳಿತ ಮಂಡಲಿಗಳು ಯಾವ ರೀತಿ ಕೆಲಸ ಮಾಡುತ್ತಿವೆ, ಅಲ್ಲಿನ ದೇವಸ್ಥಾನಗಳಿಗೆ ಸೇರಿದ ಆಸ್ತಿಪಾಸ್ತಿಯ ಸಂರಕ್ಷಣೆಯನ್ನು ಯಾವ ರೀತಿ ಮಾಡಲಾಗುತ್ತಿದೆ, ಅದಕ್ಕೆ ಎಂತಹ ವಾತಾವರಣವಿದೆ, ಹಾಗೂ ಅಲ್ಲಿ ಎಂತಹ ಕಾನೂನು ಮಾಡಿದ್ದಾರೆಂಬುದನ್ನು ನಾವು ಪರಿಗಣನೆಗೆ ತೆಗೆದುಕೊಂಡು ಅದೇ ರೀತಿಯ ಒಂದು ಹೊಸ ಕಾನೂನನ್ನು ತರಲು ನಾವು ಪ್ರಯತ್ನ ಮಾಡಿದ್ದೇವೆ. ಮತ್ತು ಈಗಾಗಲೇ ಒಂದು ಡ್ರಾಫ್ಟ್ ಬಿಲ್‌ನ್ನು ತಯಾರಿಸಿ ಡ್ರಾಫ್ಟಿಂಗ್ ಕಮಿಟಿಗೆ ಕಳುಹಿಸಿಕೊಟ್ಟಿದ್ದೇವೆ. ಅದು ಇಲ್ಲಿ ಚರ್ಚೆಗೆ ಬಂದಾಗ ಮಾನ್ಯ ಸದಸ್ಯರುಗಳಿಗೆ ಆದರ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲಲ್ಲು ಮತ್ತೊಮ್ಮೆ ಅವಕಾಶ ಸಿಗುತ್ತದೆ. ನಮ್ಮ ದೇವಸ್ಥಾನಗಳು ಅವುಗಳಿಗೆ ಸೇರಿದ

ಆಸ್ತಿಪಾಸ್ತಿಯನ್ನು ಸಂರಕ್ಷಣೆ ಮಾಡುವುದು, ನಮ್ಮ ಒಂದು ಸಂಸ್ಕೃತಿ, ಸಂಗೀತ, ಕಲೆ ಮುಂತಾದವನ್ನು ಯಾವ ರೀತಿ ಬೆಳೆಸಿಕೊಂಡು ಹೋಗಬೇಕೆಂಬ ಬಗ್ಗೆ ಬೆಳಕನ್ನು ಬೀರುವುದಕ್ಕೆ ತಮಗೆಲ್ಲರಿಗೂ ಅವಕಾಶ ಸಿಗುತ್ತದೆ. ಆದ್ದರಿಂದ ಈಗ ತಂದಿರುವ ಖಾಸಗಿ ನಿರ್ಣಯವನ್ನು ಸನ್ಮಾನ್ಯ ಮಾಯಣ್ಣನವರು ವಾಪಸ್ ಪಡೆಯುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ಸರ್ಕಾರ ತಡವಾಗಿಯಾದರೂ ಎಚ್ಚೆತ್ತಿದೆ ಎಂಬ ಮಾತನ್ನು ಹೇಳುವುದಕ್ಕೆ ಹೊರಟ್ಟಿದ್ದೇನೆ. ಮಾನ್ಯ ಮಂತ್ರಿಗಳ ಒಂದು ಅಭಿಪ್ರಾಯದ ಹಿಂದೆ ನನಗೆ ಸಮಾಧಾನವಿದೆ ಎಂಬುದರಲ್ಲಿ ನನಗೆ ನಾನೇ ಮೋಸ ಮಾಡಿಕೊಳ್ಳುವುದಿಲ್ಲ. ಏಕೆಂದರೆ, ಇದಕ್ಕೆ ಸಂಬಂಧಪಟ್ಟಂತೆ ಒಂದು ಸಮಗ್ರವಾದಂಥ ಮಸೂದೆಯನ್ನು ತರಬೇಕೆನ್ನುವ ದೃಷ್ಟಿಯಿಂದ ಅದು ಈಗಾಗಲೇ ಕಾರ್ಯಗತವಾಗುವ ರೀತಿಯಲ್ಲಿ ಕೆಲಸ ನಡೆದಿದೆ ಮತ್ತು ಇದಕ್ಕೆ ಸಂಬಂಧಪಟ್ಟಂತೆ ರಚಿತ ವಾಗಿರುವ ಕಮಿಟಿಗೆ ಮಾನ್ಯ ಕಾನೂನು ಮಂತ್ರಿಗಳೇ ಅಧ್ಯಕ್ಷರಾಗಿರುವುದಾಗಿಯೂ ಮತ್ತು ನಮ್ಮ ನೆರೆಹೊರೆ ರಾಜ್ಯಗಳಲ್ಲಿ ಯಾವ ರೀತಿ ಅಲ್ಲಿಯ ದೇವಸ್ಥಾನಗಳನ್ನು ಸಂರಕ್ಷಣೆ ಮಾಡಿದ್ದಾರೆಂಬುದನ್ನು ಸಹ ಗಮನದಲ್ಲಿಟ್ಟುಕೊಳ್ಳುವುದಾಗಿ ಮಾನ್ಯ ಮಂತ್ರಿಗಳು ಈಗತಾನೆ ಹೇಳಿರುವುದರಿಂದ ಈಗ ಮಾನ್ಯ ಮಾಯಣ್ಣನವರು ಯಾವ ಒಂದು ಉದ್ದೇಶವನ್ನಿಟ್ಟುಕೊಂಡು ಈ ಖಾಸಗಿ ನಿರ್ಣಯವನ್ನು ತಂದಿದ್ದಾರೋ ಅದು ಒಂದು ರೀತಿಯಲ್ಲಿ ಸಫಲವಾಯಿತೆಂಬ ನಂಬಿಕೆಯನ್ನಿಟ್ಟುಕೊಂಡು ಹಾಗೂ ಮಾನ್ಯ ಮಂತ್ರಿಗಳು ಕೊಟ್ಟಂತಹ ಆಶ್ವಾಸನೆಯನ್ನು ಗಮನದಲ್ಲಿಟ್ಟುಕೊಂಡು ತಮ್ಮ ಮಾತಿನಂತೆ ತಪ್ಪದೆ ನಡೆದುಕೊಳ್ಳುತ್ತಾರೆಂದು ಆಶಿಸುತ್ತೇನೆ. ಏಕೆಂದರೆ, ಈ ಹಿಂದೆ ಕೊಟ್ಟಂತಹ ಆಶ್ವಾಸನೆಗಳ ಬಗ್ಗೆ ನನಗೆ ನಂಬಿಕೆ ಇಲ್ಲವಾದರೂ ಈ ಸಲ ಕೊಟ್ಟ ಆಶ್ವಾಸನೆಯನ್ನು ಇವರು ಕಾರ್ಯರೂಪಕ್ಕೆ ತರಲಂ ಇನ್ನೊಂದು ಸಲ ಅವಕಾಶ ಕೊಡೋಣ ಹಾಗೂ ಇವರಂ ಕೊಟ್ಟ ಮಾತನ್ನು ನಡೆಸಿ ಕೊಡುತ್ತಾರೆಂಬ ಅಭಿಪ್ರಾಯ ವನ್ನು ಇಟ್ಟುಕೊಂಡು ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸ್ ಪಡೆಯುತ್ತಾರೆಂದಂ ಆಶಿಸುತ್ತೇನೆ.

ಶ್ರೀ ಡಿ.ಟಿ. ಮಾಯಣ್ಣ.—ಮಾನ್ಯ ಅಧ್ಯಕ್ಷರೇ ಈ ಒಂದು ಉದ್ದೇಶಕ್ಕಾಗಿ ಮತ್ತು ಸಮಗ್ರ ವಾದಂಥ ಕಾನೂನನ್ನು ತರುವ ವಿಚಾರದಲ್ಲಿ ಮಾನ್ಯ ಕಾನೂನು ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ರಚನೆಯಾಗಿದ್ದು, ಕಮಿಟಿಯ ಪರಿಶೀಲನೆಯ ನಂತರ ಈ ಸಭೆಯ ಮುಂದೆ ಸಮಗ್ರವಾದಂಥ ಕಾನೂನನ್ನು ತರುವುದಾಗಿ ಮಾನ್ಯ ಮಂತ್ರಿಗಳು ಕೊಟ್ಟ ಭರವಸೆಯ ಮೇಲೆ ಮತ್ತು ವಿರೋಧಪಕ್ಷದ ನಾಯಕರು ಹೇಳಿದಂಥ ಭರವಸೆಯ ಮೇಲೆ ನಾನು ಈ ನಿರ್ಣಯವನ್ನು ವಾಪಸ್ ಪಡೆಯುತ್ತಾರೆಂದಂ ಆಶಿಸುತ್ತೇನೆ.

MR. DEPUTY SPEAKER.—Is it the pleasure of the House that leave be granted to withdraw the motion moved by the hon'ble Member Sri D.T. Mayanna?

(No hon'ble Member dissented)

*The Resolution was, by the leave of the House, withdrawn.*

MR. DEPUTY SPEAKER.—Next Resolution. The hon'ble Member Sri S.M. Sheeranaly Chandrashekar to move the Resolution.

(*ii*) *Reg* : *Establishment of Malnad Improvement Board.*

SRI S.M. SHEERANALY CHANDRASHEKAR.—Sir, I beg to move the following Resolution,

"That this Assembly unanimously resolves that 'MALNAD IMPROVEMENT BOARD' comprising of all Districts of Malnad in Karnataka be established in view of the backwardness and peculiar situation prevalent in that area"

*The question was proposed*

MR. DEPUTY SPEAKER.—The House now stands adjourned to meet again at 1.00 PM on Monday.

*(The House adjourned at Fifty-five Minutes past Twelve of the Clock to meet again at One of the Clock on Monday, the 5th July, 1982.)*